A Circumnavigation to the world of Dance and Performing Arts : A complete Journal

RNI No :KARKAN/2009/29752

ಅಶ್ವೀಜ–ಕಾರ್ತಿಕ 2012

ಸಂಪುಟ : 6 ಸಂಚಿಕೆ : 5

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ನಾರಾಯಣ ಭಟ್ ಬಿ.ಜಿ
ನೆರವು : ಸಾವಿತ್ರಿ ಭಟ್ ಮತ್ತು ಸನ್ಮಿತ್ರರು
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ

ಆವರಣ ಪುಟ : ಸುನೀಲ್ ಕುಲಕರ್ಣಿ
ಅಕ್ಷರೋದ್ಯಮ, ಮಂಗಳೂರು
ಪುಟವಿನ್ಯಾಸ ಮತ್ತು ಮುದ್ರಣ :
ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

## ಶರದ್ ಸಂಭ್ರಮ

### ಅಂತರಂಗ.....


- ಮಂಜೀರ ........ 2
- ನುಡಿ ನಮನ ಅಂಜಲಿ : ವೆಂಪಟಿ ಚಿನ್ನಸತ್ಯಂ ........ 4
- ಲಲಿತ ಲಹರಿ : .ಶೃಂಗಾರ (ಅಷ್ಟ)ನಾಯಕರ ಚಿತ್ತವೃತ್ತಿ........ 7
- ಹಸ್ತ ಮಯೂರಿ : ಉತ್ಸಂಗಹಸ್ತ........ 8
- ಅಭಿಜ್ಞಾನ : ಕರ್ನಾಟಕದ ಏಕೈಕ 'ಕರಣ' ಸರದಾರ........ 9
- ದೀವಟಿಗೆ : ಅವ್ಯವಧಾನದಿಂದ ತಪ್ಪಿದ ನಾಟ್ಯಾಂಗಣದ ಸೌಂದರ್ಯಶಿಲ್ಪ ........ 13
- ನರ್ತನ ಸುರಭಿ : ........ 15
- ನಿಮ್ಮ ಬರೆಹ ನಮ್ಮ ಓದು ........ 17
- ನೃತ್ಯ ಸಂಶೋಧಕರ ಒಕ್ಕೂಟದ ವಿಕಸನ ಗೋಷ್ಠಿ........ 18
- ನೃತ್ಯ ಸಂಶೋಧನಾ ಸಮ್ಮೇಳನ–2013(ಸಂಶೋಧನಾ ಪ್ರಬಂಧಗಳಿಗೆ ಕರೆ)........ 21
- ದರ್ಪಣ : ನೃತ್ಯ ರಂಗದ ರಾಣಿ : ರುಕ್ಮಿಣಿ ( ಭಾಗ 16)........ 23


All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their own,not of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.




‘ಭಾರತದ ಕಲೆಗಳು ಅನಾದಿ, ಅದರಲ್ಲಿ ಬದಲಾವಣೆಯೇ ಆಗಿಲ್ಲ, ಪ್ರಶ್ನಾರ್ಹವಲ್ಲದ ಪುರಾತನ ಪರಂಪರೆ ನಮ್ಮದು’ ಎಂದು ನಂಬಿಸುವ, ನಂಬುವ ಎರಡೂ ವರ್ಗವಿದೆ. ಇಂದಿಗೂ ನಮ್ಮಲ್ಲಿ ಪುರಾತನ ನಾಟ್ಯಪದ್ಧತಿಯೇ ಉಳಿದು ಬಂದಿದೆ, ಅದನ್ನು ಯಥಾವತ್ ಅನುವರ್ತಿಸಬೇಕು ಎಂದು ಬಡಾಯಿ ಕೊಚ್ಚಿಕೊಳ್ಳುವ ಕಲಾವಿದರೇ ಹೆಚ್ಚು. ಇದರಿಂದಾಗಿ ಆಗುತ್ತಿರುವ, ಆಗಬಹುದಾದ ಲೋಪ, ತೊಂದರೆಗಳ ಕುರಿತು ಅಷ್ಟಾಗಿ ತಲೆ ಕೆಡಿಸಿಕೊಳ್ಳುವ ಗೋಜಿಗೆ ಹೋಗುವುದೇ ಇಲ್ಲ. ಅಪ್ರಬುದ್ಧವಾಗಿ ಪ್ರಾಚೀನತೆಯನ್ನು ಆರೋಪಿಸಿ ಕೊಂಡು ಬರುತ್ತಿರುವುದು ಅವ್ಯಾಹತವಾಗಿ ಮುಂದುವರೆಯುತ್ತಿರು ವುದರಿಂದ ಶಿಕ್ಷಣ, ಅರಿವಿನ ಪ್ರಸಾರಕ್ಕೆ ಸ್ರೋತವಾಗಬೇಕಾದ ಅದೆಷ್ಟೋ ವಿಚಾರಸಂಕಿರಣಗಳು, ಸಮ್ಮೇಳನಗಳು ಪ್ರಾರಂಭದಲ್ಲೇ ಹಾದಿ ತಪ್ಪುತ್ತಿವೆ. ಬದಲಾವಣೆಯ ಸಹಜತೆ ಕಾಲಮನೋಧರ್ಮವೆಂದು ಅರಿಯುವಲ್ಲಿ ಆಗುತ್ತಿರುವ ತೊಡಕು ಅಧ್ಯಯನ, ಅಭ್ಯಾಸ, ಪ್ರದರ್ಶನಗಳಲ್ಲಿ ಕಂದಕಗಳನ್ನೇ ಸೃಷ್ಟಿಸುತ್ತಿವೆ.

ಅಷ್ಟೇ ಅಲ್ಲ, ‘ಬದಲಾವಣೆ ಆಗಿದೆ’ ಎಂದು ಒಪ್ಪುವವರು ಕೂಡಾ ‘ಅದು ತೀರಾ ಇತ್ತೀಚೆಗೆ ಆದದ್ದು,’ ಎಂಬ ನಿಟ್ಟಿನಲ್ಲಿ ಬದಲಾವಣೆಯೆಂಬುದು ಭ್ರಷ್ಟ, ಹಾಳಾದದ್ದು, ಜನಪ್ರಿಯವಾದದ್ದು ಎಂಬರ್ಥದಲ್ಲೇ ವಾದಿಸುತ್ತಾರೆ. ನಿಜ ಹೇಳಬೇಕೆಂದರೆ ಎಷ್ಟೋ ವಿದೇಶಿಗರು ನಮ್ಮನ್ನು ಬೊಟ್ಟುಮಾಡಿ ನಮ್ಮಲ್ಲೂ ಚಲನೆ ನಿರಂತರವಾಗಿ ಕಾಲಕಾಲದಿಂದಲೂ ನಡೆಯುತ್ತಲೇ ಬಂದಿದೆ ಎಂದು ತೋರಿಸುವವರೆಗೂ ಬಹುಪಾಲು ಮಂದಿ ನಮ್ಮವರಿಗೆ ಅದರ ಅರಿವೂ ಇರಲಿಲ್ಲ !

ಇಷ್ಟರಮಟ್ಟಿಗಿನ ಪೀಠಿಕೆಯ ಹಿಂದೆ ಒಂದು ಕಾರಣವಿದೆ. ಅದು ಇತ್ತೀಚಿನ ದಿನಮಾನಗಳಲ್ಲಿ ವ್ಯಾಪಕವಾಗಿ ಪ್ರಚಲಿತವಾಗುತ್ತಿರುವ ಒಂದು ‘ಟ್ರೆಂಡ್’ನ ಸೂಚಿ. ಆ ಮೂಲಕವಾಗಿ ತಾವು ಪ್ರಾಚೀನತೆಯನ್ನು ಗೌರವಿಸುತ್ತೇವೆ ಎಂಬ ಬ್ಯಾನರ್ ಬಗಲಿಗೆ ಹಾಕಿಕೊಳ್ಳುವುದು ಒಂದು ಲಾಭವಾದರೆ; ‘ಅಂತಹುದರ’ ಆಧಾರದಲ್ಲಿ ತಮ್ಮ ಅಧ್ಯಯನ, ಮಾತುಕತೆಗಳು ಹೊರಬಂದರೆ ಅದು ನಿರ್ವಿವಾದವಾಗುತ್ತವೆ, ಘನತೆ ಒದಗುತ್ತದೆಯೆನ್ನುವ ಮಟ್ಟಿಗೆ ಮಂಕುಬೂದಿ ಎರಚುವ ಗಟ್ಟಿತನ. ಅಂತಹ ಮೂಲ ಆಕರ ಬೇರಾವುದೂ ಅಲ್ಲ; ಭರತನ ‘ನಾಟ್ಯಶಾಸ್ತ್ರ’!!!

ಅದೊಂದು ಕಾಲವಿತ್ತು. ನಾಟ್ಯಶಾಸ್ತ್ರದ ಹೆಸರೆತ್ತಿದರೆ ಸಾಕು ‘ಶಾಂತಂ ಪಾಪಂ’ ಎಂದು ಕೆನ್ನೆ ಕೆನ್ನೆಗೆ ಹೊಡೆದುಕೊಳ್ಳುವಷ್ಟರ ಮಟ್ಟಿಗೆ; ನಾಟ್ಯಶಾಸ್ತ್ರದ ಅಂಶಗಳನ್ನು ಪ್ರಾಯೋಗಿಕ ನೆಲೆಗೆ ತರಲು ಹಿಂದೇಟು ಹಾಕುವ ಅಸ್ಪೃಶ್ಯತೆ. ಹೆಚ್ಚೇನೂ ದೂರ ಹೋಗಬೇಕಿಲ್ಲ. 50–60 ದಶಕದ ಹಿಂದಕ್ಕೆ ಒಮ್ಮೆ ಕಣ್ಣೋಟ ಹರಿಸಿದರೂ ಸಾಕು; ನೃತ್ಯಪದ್ಧತಿ ನಡೆದು ಬಂದ ಹಾದಿಗೆ ಸಾಕ್ಷಿಯೆಂಬಂತೆ ಬಹಳ ಸ್ಪಷ್ಟವಾಗಿ ನಾಟ್ಯಶಾಸ್ತ್ರದ ಭಗ್ನ ಅವಶೇಷಗಳು ಕಾಲಿಗೆ ತೊಡರುತ್ತವೆ. ಇಲ್ಲಿನ ಮತ್ತೊಂದು ವಿಶೇಷದ ಸಂಗತಿಯೆಂದರೆ ಇದೇ ಅವಧಿಯಲ್ಲಿಯೇ ಕ್ರಾಂತಿಕಾರಕವಾದ ನಡೆಗಳು ಕಾಣಿಸಿಕೊಂಡು ನಾಟ್ಯಶಾಸ್ತ್ರದ ಅರಿವನ್ನು ಮೈಮನದೊಳಕ್ಕಿಳಿಸಿಕೊಳ್ಳುವ ಸಂಶೋಧನೆಗಳು, ಅನುವಾದಗಳು, ವ್ಯಾಖ್ಯಾನಗಳೂ ನಡೆದವು. ಅಸ್ಪೃಶ್ಯತೆಯ ಸಂಕೋಲೆಯಿಂದ ಸ್ಪೃಶ್ಯವಾಗುವ ಸಂಧಿಕಾಲದೊಳಗೆ ನಡೆದ ಪ್ರಗತಿ, ದೊರಕಿದ ನೋಟ ಇಂದಿನ ಕಾಲಕ್ಕೂ ಆದರ್ಶಪ್ರಾಯವಾಗಿ ನಿಂತಿವೆ.

ಆದರೆ ಪಡೆದುಕೊಂಡದ್ದನ್ನು ಉಳಿಸಿಕೊಳ್ಳುವ ಲವಲೇಶ ಕಳಕಳಿಯೂ ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಕಳೆದ 5 ವರುಷಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಕನ್ನಡಿ ಹಿಡಿಯುತ್ತಿವೆ.

ಭರತಖಂಡದ ಕಲೆಗಳಿಗೆ ಭರತನ ಶಾಸ್ತ್ರವೇ ಆಧಾರವಾಗಿದ್ದರೂ ಕಂಡದ್ದು ಮುಟ್ಟಿದಕ್ಕೆಲ್ಲಾ ನಾಟ್ಯಶಾಸ್ತ್ರದ ನಂಟೆಂದರೆ ಏನನ್ನೋಣ ? ಶಾಸ್ತ್ರದ ಅರಿವು ಕೊಂಚಮಟ್ಟಿಗೆ ಧನಾತ್ಮಕವಾಗಿ ಹಬ್ಬುತ್ತಲಿದೆ ಎಂದು ತಿಳಿಯುವಷ್ಟರೊಳಗೆ ಅದನ್ನು ಯಾವ ಬಗೆಯಲ್ಲೆಲ್ಲಾ ತಮಗೆ ಅನುಕೂಲಕರವಾಗಿ ಪರಿವರ್ತಿಸಬಹುದು ಎಂಬ ಲಾಭಕೋರತನ. ಅನಾದಿಯೆಂಬುದನ್ನು ತಮ್ಮ ನಖಶಿಖಾದ್ಯಂತವೂ ಅಂಟಿಸಿಕೊಳ್ಳುವ ವ್ಯವಸ್ಥಿತ ಸಂಚು. ಒಟ್ಟಿನಲ್ಲಿ ತಮಗನಿಸಿದ ವ್ಯಾಖ್ಯಾನಗಳನ್ನು ನೀಡುವ, ತಮಗನಿಸಿದ ಅಧ್ಯಯನಗಳಿಗೆಲ್ಲಾ ಶಾಸ್ತ್ರಾಧಾರದ ಲೇಪ ಕೊಡುವ ಹಿತಾಸಕ್ತಿಗಳಿಗೆ ನಾಟ್ಯಶಾಸ್ತ್ರವೇ ಮೊದಲ ಬಲಿ !!

ಹಾಗೆ ನೋಡಿದರೆ ಭರತನ ನಾಟ್ಯಶಾಸ್ತ್ರವನ್ನಾಧರಿಸಿ ತದನಂತರದ ಶತಮಾನಗಳಲ್ಲಿ ಹಲವು ಗ್ರಂಥಕರ್ತರು, ಶಾಸ್ತ್ರಕಾರರು, ವ್ಯಾಖ್ಯಾನಕಾರರು ಗ್ರಂಥಗಳನ್ನು ಬರೆದಿದ್ದಾರೆ. ಹೀಗಾಗಿ ಮಾರ್ಗದೊಳಗೂ ಅನೇಕ ಗುರಿಗಳೆಡೆಗೆ ಹಲವು ಉಪಮಾರ್ಗಗಳು ಕಾಲದೊಂದಿಗೆ ಹೆಜ್ಜೆ ಹಾಕುತ್ತಾ ನಡೆದು ವಿಭಿನ್ನ ಪರಂಪರೆಗಳನ್ನು ಕಾಣುತ್ತಾ ಬಂದಿದೆ. ಆ ಪರಂಪರೆಗಳೊಳಗೂ ಒಳಪರಂಪರೆಗಳು ನಿರ್ಮಿತವಾಗಿ ಕಾಲಕ್ರಮದಲ್ಲಿ ಇಚ್ಛಾನುಸಾರ ನಡೆಗಳನ್ನು ಪಡೆದಿದೆ. ಹೀಗೆ ಭರತಮಾರ್ಗ ಪದ್ಧತಿಯಿಂದ ಪಕ್ಕಕ್ಕೆ ಹೊರಳಿಕೊಂಡ ಎಲ್ಲಾ ನರ್ತನಪದ್ಧತಿಯೂ ಕಾಲ–ದೇಶ–ಸ್ಥಿತಿಯನ್ನು ಅವಲಂಬಿಸಿ ಆಯುಷ್ಯವನ್ನು ಪಡೆಯುತ್ತವೆ; ಅದರ ಬಾಲ್ಯದಿಂದ ವೃದ್ಧಾಪ್ಯದ ವರೆಗೂ ಕಾಲ–ಜೀವನಸಹಜವಾದ ಸ್ಥಿತ್ಯಂತರಗಳನ್ನು ಅನುಭವಿಸುತ್ತಾ ಬೆಳೆದು ಕೊನೆಗೆ ಸತ್ತ್ವವಾದುದನ್ನಷ್ಟೇ ಉಳಿಸಿ ಮರೆಗೆ ಸರಿಯುತ್ತವೆ. ಸತ್ತ್ವಗಳ ಬುಡ ಗಟ್ಟಿಯಿದ್ದಷ್ಟು ದಿನ ಪರಂಪರೆಯೂ ತನ್ನ ಭೌತಿಕವಲ್ಲದಿದ್ದರೂ, ಸೂಕ್ಷ್ಮಶರೀರದಿಂದ ಬದುಕುತ್ತಾ ಪ್ರೇರಣೆ, ಪೋಷಣೆಯನ್ನೀಯುತ್ತವೆ. ನಾಟ್ಯಶಾಸ್ತ್ರದ ಅಡಿಪಾಯ ಇದ್ದಾಗ್ಯೂ ಇಂತಹ ಹಲವು ಪರಂಪರೆಗಳಿಗೆ ನಮ್ರವಾಗಿ ಬದುಕಿದ ಅದೆಷ್ಟೋ ಶಾಸ್ತ್ರೀಯ ಮಾನ್ಯತೆ ಪಡೆದ ಪಾರಂಪರಿಕ ನೃತ್ಯಗಳು ಮತ್ತು ಕಲಾವಿದರು ಇಂತಹ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳಬಾರದೇ? ಎಲ್ಲದಕ್ಕೂ ನಾಟ್ಯಶಾಸ್ತ್ರದ ಅಂಶಗಳನ್ನೇ ಆರೋಪಿಸಿ ಸಾಧಿಸುವ ಬಲವಂತವ್ಯಾಕೆ?

ಆದರೆ ನಾಗಾಲೋಟದ ಕಾಲದೊಂದಿಗೆ ಕಾಲುಹಾಕುವ ಅವಸರಕ್ಕೆ ಬಿದ್ದ ಮನಸ್ಸು ಇದಾವುದರ ಸುಳಿವನ್ನು ಅರಿಯುವ ವ್ಯವಧಾನವನ್ನಾಗಲೀ, ನಮಗೆ ನಾವೇ ಮಾಡಿಕೊಳ್ಳುತ್ತಿರುವ ವಂಚನೆ ಎಂಬ ಪ್ರಜ್ಞೆಯನ್ನಾಗಲೀ ನೀಡದಿರುವುದು ದುರದೃಷ್ಟ. ಅದಕ್ಕೆ ತಕ್ಕಂತೆ ನಾಟ್ಯಶಾಸ್ತ್ರದ ಅಂತಃಸತ್ತ್ವದ ಒಂದಂಶವನ್ನು ಅರಗಿಸಿಕೊಳ್ಳುವುದಕ್ಕೂ ಮುಂಚೆಯೇ ಕಾಲ, ದೇಶ ಔಚಿತ್ಯದ ವ್ಯಾಪ್ತಿಯನ್ನರಿಯದೆ ಶಾಸ್ತ್ರದ ಸೆರಗಿನಡಿಯಲ್ಲಿ ರಾಜಾರೋಷವಾಗಿ ಕಳ್ಳಾಟವಾಡುವ ಈ ಅಪಾಯಕಾರಿ ಬುದ್ಧಿಯೂ ಕಾಣಿಸೊಂಡಿದ್ದು; ನುಂಗಲಾರದ ತುತ್ತೇ ಆಗಿದೆ. ನಾಟ್ಯಶಾಸ್ತ್ರದ ಪ್ರಸ್ತುತತೆಯ ಅರಿವು ಬೆಳೆಯುತ್ತಿದೆ ಎಂಬ ಸಂತಸಕ್ಕಿಂತಲೂ ಆಗಬಹುದಾದ ಅಪಸವ್ಯಗಳತ್ತ ಗಮನಹರಿಸಿದರೆ ನೃತ್ಯ ಮತ್ತೊಮ್ಮೆ ಕತ್ತಲೆಯ ಯುಗವನ್ನು ಪ್ರವೇಶಿಸುವ ಕಾಲ ಒದಗಬಹುದೇ ಎಂದು ಅನಿಸದಿರದು. ಅಷ್ಟೇ ಅಲ್ಲ, ಮುಂದೊಂದು ದಿನ ಶಾಸ್ತ್ರದ ಹೆಸರಿನಲ್ಲಿ ಏನೇನೋ ಅವಾಂತರಗಳಿಗಿಂತ ಏನೂ ಇಲ್ಲದ ಸ್ಥಿತಿಯೇ ಕ್ಷೇಮ ಎಂದುಕೊಳ್ಳುವ ಪ್ರಮೇಯ ಪುನರುಕ್ತವಾದರೆ ತಲೆತಗ್ಗಿಸಿ ಪಶ್ಚಾತ್ತಾಪಪಟ್ಟರೂ ಪ್ರಾಯಶ್ಚಿತ್ತವೇ ಇಲ್ಲದಂತಾದೀತು. ರಸೋತ್ಪತ್ತಿಯ ದಾರಿಗಳೆಡೆಗೆ ದುರ್ಬೀನು ಹಾಕಿ ಹುಡುಕುವ ಸಂದರ್ಭಗಳು ಎದುರಾದೀತು !

ಪ್ರೀತಿಯಿಂದ,

**ಸಂಪಾದಕರು**

## NUDI NAMANA ANJALI



# "To Watch Him Dance Was to Hear His Heart Speak"

***A Tribute to***

***PADMABHUSHAN DR VEMPATTI CHINNA SATYAM***

**- Dr Vasanth Kiran, Bengaluru**

"Lord Nataraja was once dancing with his bells strewn around his feet and one of the bells fell off onto the earth with the intention of spreading this divine art of dance on Earth and that sacred bell was none other than the legendary Padmabhushan Dr. Vempatti Chinna Satyam."



**Oct 25, 1929- July 29, 2012**

Born in the non-descript tiny village of Kuchipudi(Krishna .Dt) in Andhra that gave its very name to the divine dance form, Dr. Vempatti Chinna Satyam was a man with a mission. A noble mission to spread this divine art form from his tiny village to the different levels altogether. This remarkable journey for Madras began at the age of 18 with a mere sum of Rs.2 in his pocket and a wife's promise to be with him in every mode of life. His wife Smt. Swarajyalakshmi fondly known by his disciples as 'Amma' was a major pillar throughout his life.

Madras then considered being "The Cultural Mecca for fine arts" had strong presence of Bharatanatyam and had well renowned gurus teaching this art form. It was a herculean task for Dr Chinna Satyam to establish Kuchipudi in Madras. His conviction to revive and popularize the art form all over the world laid the foundation for the Kuchipudi Art Academy in 1963. He composed his first dance drama Sri Krishna Parijatham in the same period followed by another hit Ksheera Sagara Madanam and played the lead role. His portrayal of Lord Shiva and his brilliant choreography was received with thunderous applause. With his very first attempt passing in flying colors, his long cherished desire to establish Kuchipudi among the prominent classical styles, got a shot in the arm.

Vempatti began dancing from a very early age. It was Vedantam Laxminarayana Shastri who initiated Vempati into this art form. He refined his art by learning from Tadepalli Perayya Shastri and later undertook vigorous training from his elder cousin Vempatti Pedda Satyam. Kuchipudi was traditionally considered as folk art. It was never accorded the status of a classical dance form. It would be disrespectful on my part if I would fail to acknowledge the relentless efforts of Master garu which led

the Central Government to accord Kuchipudi with the classical status and also took it to the world over and won over the hearts of millions of connoisseurs.

***Gurukulam :*** As a guru, he was a traditionalist and adopted age-old practice of chastising the pupils till they 'got it right' and the end product is perfection. "Pratha Smarami" shloka that marks the start of the session everyday early morning is an entry to freshness and also a call for a tough day ahead. One had no shortcuts in the "Kuchipudi Art Academy". It is because of this strict and strong foundation which has made students of the academy stand apart. The shloka, hastas, pada bheda, charis were compulsory before the beginning of steps, jathis and so on in a structured format, one can't skip it. The mere presence of master garu used to give the disciples a different level of energy to perform, such was the effect of the presence of this godly man. One should note that, this probably is the only Gurukulam where for his entire life since inception of academy hasn't taken any fee from students, living upto the promise made to his Guru. The only return he expected for his world class quality in teaching was utmost sincerity, dedication and promise of sustaining purity in this art form from every disciple. *"He lived for art, while we live on art"*. It is recorded that over 10000 students have now studied in this academy and are now settled in over 60 countries spreading this divine art.

***Choreographies*** : Vempatti's charismatic choreography and scintillating style were witnessed and applauded in almost all parts of the world. He sublimated and systematized Kuchipudi without sacrificing its pristine purity and gave it a more classical and sophisticated look. He refined and redefined Kuchipudi bringing it completely within the boundaries of Natya Sastra and gave it a wholly new perspective. One can't forget the furore that his ballet's like Srikishna Parijatham, Chandalika, Kalyana Sakunthalam, Srinivasa Kalyanam, Annamayya, Hara Vilasam, Ksheera Sagara Mathanam and many more which numbered to 18. It should be interesting to note that he has choreographed more than 150 solo items out of which only around 80 items are preserved and performed. His portrayal of Lord Shiva and his brilliant choreography was received with thunderous applause. He is a symbol of dedication and a source of inspiration to the world of dance.

His richness in approaching every item with freshness and the thought process behind art of handling the song while understanding the intention of the composer, suitability of raga for the mood were the secrets behind the unmatched compositions that he has made. He was an expert in music and has penned several items including Padams and Thillanas.

If Lakshminarayana Sastry broke the tradition of only men playing female roles, by introducing women and creating solo presentations; Chinna Satyam made women take up even male roles in his ballets. In one way he was an extension Lakshinarayana Sastry. Vempatti even broke tradition even in costume. He argued that "Tradition changes with times. We have to re-interpret it to suit the social changes". If Sidhendra Yogi was the architect of Kuchipudi, Dr Vempatti Chinna Satyam was the executor of this architecture.



***Shishyavrinda*** : Name any proficient dancer who practises Kuchipudi and you will find the influence or the training of master garu. In short, it would be appropriate to say that Mastergaru touched the lives of every Kuchipudi Dancer in some way or the other. It was his mere perfection in execution, captivating choreography and his divine style, which enthralled a number of students from all over the world to come and learn under him and today some have made great impact in the field of Kuchipudi. May it be Balasaraswati, Vyjayanti Mala, Shoba Naidu, Manju Bhargavi, Hema Malini, Jayalalitha, Rekha, Prabha, Ratna Papa and the list goes on who are the house hold names in the field of dance today. Guru Vempatti Ravi Shankar, the younger son is taking ahead this tradition and has already made mark for himself in Kuchipudi following the footsteps of his father.

People looked at him with awe. One didn't have the courage to look into the eyes of master garu while he spoke; this was the kind of *Guru bhakti* that every shishya followed throughout. His majestic personality was like a walk of lion in the class. The classes ran both in the morning and evening everyday and the kind of practice that each one got gave them a tremendous stamina, making them performers sans compromise on quality.

***Awards and Accolades :*** Dr. Vempatti was conferred with many titles and awards such as "Sangeet Peeth of Bombay", "Asthana Natyacharya of Tirumala Tirupati Devasthanam", T.T.K. Memorial Award by Madras Music Academy, "Natya Kalasaagara of Waltair", "Kalaprapoorna" from Andhra University, "Bharatha Kalaprapoorna of Hyderabad", D. Litt. from Sri Venkateswara University, "Asthana Natyacharya of Pittsburgh", and "National Award from Central Sangeet Naatak Akademi, New Delhi". He was awarded by many state governments of India such as Kalidas Puraskar by the Government of Madhya Pradesh and Kalaimamani by the Government of Tamil Nadu. He was honored with a Doctorate degree by Andhra University and was awarded the Padma Bhushan by the Government of India. In honour of the dancing guru, the African State of Ghana declared September 25 as Vempati Chinna Satyam day in 1994. The Mayor of Atlanta declared November 3, 1994 as Kuchipudi Dance Drama Day. The Mayor of Cleveland conferred honorary citizenship on Dr. Vempati. The Mayor of Memphis declared September 24, 1994 as 'Ramayana Day' and the Golden Key to the city was awarded to him.

He reached the abode of Lord Nataraja at the age of 83. It is an irreplaceable loss to the field of dance in general and Kuchipudi in particular. His only wish always was to dance, dance and dance. He is a 'Yuga Purusha, Na Bhooto Na Bhavishyati'.

**(Dr Vasanth Kiran, is a Bharatanatyam and Kuchipudi performer and teacher and is fortunate to have learnt from this great man in Kuchipudi Art Academy, Madras and Guru Manju Barggavee. He is PhD in Management, Professor, Researcher and is Director, Natyanidhi Institute of Performing Arts, Bangalore. www.vasantnrithyam.in)**

**ಲಲಿತ ಲಹರಿ**

# ಶೃಂಗಾರ(ಅಷ್ಟ)ನಾಯಕರ ಚಿತ್ತವೃತ್ತಿ

ಶತಾವಧಾನಿ ಡಾ. ಆರ್. ಗಣೇಶ್, ಬೆಂಗಳೂರು

ಅಷ್ಟನಾಯಿಕೆಯರ ಅವಸ್ಥೆಗಳಿಗೆ ಪ್ರತಿಕ್ರಿಯಾತ್ಮಕವಾಗಿ ಅಷ್ಟನಾಯಕಾವಸ್ಥೆಯನ್ನು ರೂಪಿಸಬಹುದಾಗಿದ್ದರೂ ಯಾವ ಲಾಕ್ಷಣಿಕರೂ ಅಂತಹ ಅಭೂತಪೂರ್ವ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೆ ಶತಾವಧಾನಿ ಡಾ.ಆರ್.ಗಣೇಶರು ನಾಯಕರ ಸಾಲಿಗೆ ಹೊಸ ಸಂವಿಧಾನವನ್ನೇ ನೀಡಿದ್ದು; ನಾಯಕಭಾವಕ್ಕೆ ಲಕ್ಷಣಗಳನ್ನೂ, ಲಕ್ಷ್ಯಗೀತಗಳನ್ನೂ ರಾಗ ತಾಳಬದ್ಧವಾಗಿ ರಚಿಸಿದ್ದಾರೆ. ಈಮೂಲಕ ಇದುವರೆವಿಗೂ ಲಕ್ಷಣಬದ್ಧವಾಗದ ಆದರೆ ಲಕ್ಷಣೀಕರಿಸಲು ವಿಫುಲಾವಕಾಶವಿರುವ ಅಂಶಗಳನ್ನು ಕ್ರೋಢೀಕರಿಸಲಾಗಿದೆ. ರಾಗ–ತಾಳಗಳನ್ನೂ ಸ್ವತಃ ಶತಾವಧಾನಿ ಗಣೇಶರೇ ಸಂಯೋಜಿಸಿದ್ದು ; ನಾಯಕರ ಕುರಿತಾಗಿ ಕಾಡುತ್ತಿರುವ ಸಾಹಿತ್ಯದ ಕೊರತೆಯನ್ನು ತುಂಬಿಕೊಡುವಲ್ಲಿ ಇದು ನಿಜಕ್ಕೂ ಅಸಾಧಾರಣ ಶೋಧವೇ ಸರಿ. ಇದನ್ನು ಅರ್ಥೈಸಿಕೊಳ್ಳುವಲ್ಲಿ ಪೂರ್ವಭಾವಿಯಾಗಿ ಶತಾವಧಾನಿಗಳಿಂದ ರಚಿತ ನಾಯಕಭಾವದ ಗುಣಲಕ್ಷಣ ಸಾಹಿತ್ಯ ಅನುಕೂಲತೆಗಳ ಬಗೆಗಿನ ವಿಚಾರಸರಣಿಗಳನ್ನು ಕಳೆದೆರಡು ಸಂಚಿಕೆಗಳಲ್ಲಿ ನೀಡಿದ್ದೇವೆ. ಇದು ಸಾಂಸ್ಕೃತಿಕ ಪತ್ರಿಕಾಲೋಕದಲ್ಲಿ ಹಿಂದೆಂದೂ ಇಲ್ಲದಂತೆ ನೂಪುರಭ್ರಮರಿಯ ಪಾಲಿಗೆ ಒದಗಿದ್ದು ನಿಜಕ್ಕೂ ಒಂದು ಹೆಮ್ಮೆ ಮತ್ತು ಅಪೂರ್ವ ಅವಕಾಶ. ನಮ್ಮ ಪ್ರಯತ್ನ ನಿಮ್ಮಿಂದ ಸದ್ವಿನಿಯೋಗವಾಗಲಿ...

ಪಾಂಥ–ಪಥಿಕನಾದ ನಾಯಕನಿವನು. ಈತನು ವ್ಯಾಪಾರಿಯೋ, ರಾಜದೂತನೋ..., ಹೀಗೆ ವೈಯಕ್ತಿಕ ಕಾರಣ ಅಥವಾ ಉದ್ಯೋಗನಿಮಿತ್ತ ಪ್ರವಾಸದಲ್ಲಿರುವ ಈ ನಾಯಕನು ಪ್ರೋಷಿತಭರ್ತೃಕೆಯ(ನಾಯಕನ ಪ್ರವಾಸದಿಂದ ಮ್ಲಾನವದನೆಯಾಗಿ ಅವನನ್ನೇ ನಿರೀಕ್ಷಿಸುತ್ತಿರುವವಳು) ಪ್ರಿಯ. ಊರೂರು ತಿರುಗುತ್ತಿರುವ ಈತನಿಗೆ ಕಾಂತೆಯ ಕುರಿತ ಚಿಂತೆ, ನೆನಪು ಕಾಡುತ್ತಿದೆ. ಆಕೆಯನ್ನು ಎಂದು ಕಾಣುವೆನೋ ಎಂದಾಗಿ ದಿನಗಣನೆ, ಆಕೆಯನ್ನು ಬಿಟ್ಟಿರಬೇಕಾದ ವೇದನೆ, ಆಲಸ್ಯ, ನಿದ್ರಾಹೀನತೆ, ಏನೂ ತೋಚದಂತಾಗಿರುವುದು, ತನ್ನ ಕೆಲಸಗಳನ್ನು ಬೇಕೂ ಬೇಡದಂತೆ ಮಾಡುವುದು, ಆಕೆಯನ್ನು ಮನೆಯಲ್ಲಿ ಒಂಟಿಯಾಗಿಸಿ ಬಂದ ದಿನದ ಮೆಲುಕು, ಚಡಪಡಿಕೆ, ಆತನ ಕಾರ್ಯಕ್ಕೆ ಒದಗುವ ಅಡ್ಡಿ, ಮಿತಿಗಳು ಮತ್ತು ಆ ಹಿನ್ನೆಲೆಯಲ್ಲಿ ತನ್ನ ಉದ್ಯೋಗ ಮತ್ತು ವಿಧಿಯಾಟದ ಮೇಲೆ ಪರಿತಾಪ ಈತನ ಅವಸ್ಥೆಗಳು. ಈ ವಸ್ತುವನ್ನು ಪ್ರಸ್ತುತ ಕಾಲಮಾನಕ್ಕೂ ಹೊಂದಿಸಿಕೊಂಡು ಭಾವಯಾನ ಮಾಡಿಸಬಹುದು.

ಇಲ್ಲಿ ರತಿ ಸ್ಥಾಯಿಭಾವ. ನಾಯಕನ ಪ್ರಿಯೆ ಇಲ್ಲಿನ ಆಲಂಬನ ವಿಭಾವ. ಪ್ರವಾಸದ ಸಂದರ್ಭದಲ್ಲಿ ಬರುವ ಒಳಿತು–ಕೆಡುಕು, ಎಲ್ಲ ಋತು, ಬಣ್ಣದ ಸನ್ನಿವೇಶಗಳು ಉದ್ದೀಪನ ವಿಭಾವ. ಅಭಿಲಾಷೆ, ಚಿಂತನ, ಸ್ಮೃತಿ, ಗುಣಕಥನ, ಉದ್ವೇಗ, ಪ್ರಲಾಪ, ಉನ್ಮಾದ, ಜ್ವರ, ಜಡತೆ ಈತನಲ್ಲಿ ಕಂಡುಬರುವ ವ್ಯಭಿಚಾರಿಭಾವಗಳು. ಇಲ್ಲಿನ ಸಾಹಿತ್ಯವು ಕಂದಪದ್ಯದಿಂದ ಪ್ರಾರಂಭವಾಗಿ ನಾಯಕನ ಲಕ್ಷಣಗಳನ್ನು ವ್ಯಾಖ್ಯಾನಿಸುತ್ತದೆ. ನಂತರದ ಲಕ್ಷ್ಯಗೀತೆಯಲ್ಲಿ ನಾಯಕನಿಗೆ ಸಂಬಂಧಿಸಿದ ಉದ್ದೀಪನ ವಿಭಾವಗಳ ಸೂಕ್ಷ್ಮಗಳಿವೆ.

## ಪಾಂಥ

ರಾಗ : ಬಾಗೇಶ್ರೀ, ತಾಳ : ಆದಿ

ಕಾಂತೆಯ ಸಂಗದೆ ದೂರಂ
ಶ್ರಾಂತಂ ಕಾರ್ಯಾಂತರ ಪ್ರವಾಸಪ್ರಚುರಂ
ಚಿಂತಾಚಕಿತವಿಚಾರಂ
ಕಾಂತನಿವಂ ಪಾಂಥನೆಂಬ ನಾಯಕಪರಂ

ಏನೀ ಯಾನ-ವಿಯೋಗವಿಧಾನ
ಮಾನಸವೇದನ ಮಾನ

ಮರೆಯುವೆನೆಂತೀ ಪಯಣದಾದಿಯಲಿ
ಗುರುಜನಭೀತೆ, ವಿನೀತೆ
ಬಿರಿದ ಕಂಗಳಿಂ ವಿದಾಯಪಾಥೇ-
ಯರುಚಿಯ ರಚಿಸಿದ ಪರಿಯ

ಎಂತಿರುವಳೊ ಮೇಣೆಂತು ನವೆವಳೋ ?
ಚಿಂತಾಚಕಿತೆ – ಅಶಾಂತೆ
ಕಂತುಕಲಂಬಗಳಿಂತು ಪೀಡಿಸಿರೆ
ಸಂತರಣದ ವಿಧಿಯೆಂತೋ ?

ಬಾನಲಿ ಮುಗಿಲನು ಕಾಂಬ ಮುನ್ನವೇ
ಮಾನಿನಿಯನು ಮನೆಯಲಿ ಕಾಂಬೆನೇ ?
ಈ ನರಜನ್ಮದ ಪರಾಧೀನತೆಗೆ
ಏನಪ್ಪುದೊ ಕೊನೆ ? ಚಿರಚಿಂತನೆ !

## ಹಸ್ತ ಮಯೂರಿ

**(ಸಂಪಾದಕಿ ಮನೋರಮಾ ಬಿ.ಎನ್ ರಚಿತ 'ಮುದ್ರಾರ್ಣವ' ಗ್ರಂಥದಿಂದಾಯ್ದ ಅಂಕಣ ಸರಣಿ)**



**ಉತ್ಸಂಗಹಸ್ತ**

**ಲಕ್ಷಣ:ಮೃಗಶೀರ್ಷ ಹಸ್ತಗಳನ್ನು ಸ್ವಸ್ತಿಕಾಕಾರ ಮಾಡಿ ಬಲಗೈಯನ್ನು ಎಡಭುಜದ ಬಳಿಯೂ, ಎಡಗೈಯನ್ನು ಬಲಭುಜದ ಬಳಿಯೂ ಇರಿಸುವುದು. ಅರಾಳ ಮತ್ತು ಸರ್ಪಶೀರ್ಷ ಹಸ್ತಗಳನ್ನು ಕೊಂಚ ವ್ಯತ್ಯಾಸದೊಂದಿಗೆ ಇರಿಸುವ ಕ್ರಮ ನಾಟ್ಯಶಾಸ್ತ್ರ, ಹಸ್ತಮುಕ್ತಾವಳಿಯಲ್ಲಿದೆ.**

**ಈ ಹಸ್ತದ ಅಧಿದೇವತೆ : ಗೌತಮ.**

**ವಿನಿಯೋಗ :** ಆಲಿಂಗನ ಮಾಡುವುದು, ನಾಚಿಕೆ, ಅಂಗಾದಿಗಳನ್ನು ತೋರಿಸುವುದು, ಬಾಲಕರಿಗೆ ಶಿಕ್ಷಣ, ತೋಳ್ಬಂದಿ ಮತ್ತಿತರ ಅಲಂಕಾರಗಳು.

**ಇತರೇ ವಿನಿಯೋಗ :** ಮಳೆಯಿಂದ ನಡುಗುವುದು, ಕುಸ್ತಿಯಲ್ಲಿ ಶತ್ರುವನ್ನು ಬಿಗಿಯಾಗಿ ಹಿಡಿಯುವುದು, ತುಚ್ಛವಾದ ನಾಟ್ಯ, ದುಃಖವಿಚಾರ, ಹೆಚ್ಚು ಪ್ರಯತ್ನದಿಂದ ಸಾಧ್ಯವಾಗುವ ಕೆಲಸ, ಶೈತ್ಯ, 'ಅಲಂಕಾರ ಬೇಡ' ಎನ್ನುವುದು, ಜಪ, ಸಮಾಧಿ, ಯೋಗಾಭ್ಯಾಸ, ಮುಟ್ಟುವುದು, ಅದುಮುವುದು, ಬಂಧನ, ಸಿಟ್ಟು-ಅಸಹನೆ-ಈರ್ಷ್ಯೆಗಳಲ್ಲಿ ಕೈಹಿಸುಕುವುದು, ಪಲ್ಲಂಗ-ಹೊದಿಕೆ ಮುಂತಾದ ಹತ್ತಿವಸ್ತ್ರಗಳು, ಆಭರಣ, ಮಂಚಕ್ಕೆ ಹಾಕುವ ಬಟ್ಟೆಯೊಂದರ ಮೇಲ್‌ಹೊದಿಕೆ, ಕತ್ತಲೆ, ಹಾಲು ಒಸರುವುದು, ಒತ್ತುವುದು, ಕ್ಷಮಿಸಲು ನಿರಾಕರಿಸುವುದು, ಸ್ಪರ್ಶ, ತೆಗೆದುಕೊಳ್ಳುವುದು, ಅತಿಯಾದ ಮತ್ಸರ, ರಥ, ಹುಲ್ಲು, ದಿನ -ಪಾಕ್ಷಿಕ-ತಿಂಗಳು-ವರ್ಷ, ಹರುಷ, ಸಮಯವನ್ನು ಅಳೆಯುವುದು, ಮಡಚುವ ವಸ್ತು, ಶತ್ರುಗಳನ್ನು ಅದುಮುವುದು, ಮಲ್ಲಯುದ್ಧದಲ್ಲಿ ಸವಾಲೆಸೆಯುವುದು, ಒಪ್ಪಂದ, ಸಾಧು ಭಾವ, ಸ್ತನಗಳನ್ನು ಮುಚ್ಚಿಕೊಳ್ಳುವುದು, ಸ್ವಾತಂತ್ರ್ಯ, ಕದನ, ಚಳಿಗಾಲ, ಮಗುವನ್ನು ಎತ್ತಿಕೊಳ್ಳುವುದು.

**ನಿತ್ಯಜೀವನದಲ್ಲಿ** ಅಪ್ಪಿಕೊಳ್ಳುವುದು, ಚಳಿಯಿಂದ ನಡುಗುವುದು, ಭಯ ಇತ್ಯಾದಿ ಸಂವಹನಕ್ಕೆ ಬಳಸುತ್ತಾರೆ.

ಅಭಿಜ್ಞಾನ

# ಕರ್ನಾಟಕದ ಏಕೈಕ 'ಕರಣ' ಸರದಾರ
# *ಚೇತನ್ ವರ್ಣ*

– ನಿರೂಪಣೆ : ಮನೂ 'ಬನ'

ಅಭಿಜ್ಞಾನ–ಈ ಶಬ್ದ ಕಾಳಿದಾಸನ 'ಅಭಿಜ್ಞಾನ ಶಾಂಕುತಲ'ದಿಂದ ಸುವಿಖ್ಯಾತ. ಅಷ್ಟೇಕೆ, ನಾಟ್ಯಶಾಸ್ತ್ರಕ್ಕೇ ವ್ಯಾಖ್ಯಾನವನ್ನಿತ್ತ ಅಭಿನವಗುಪ್ತರಿಗೆ ತುಂಬ ಪ್ರಿಯವಾದ ದರ್ಶನದ ಹೆಸರೂ ಹೌದು. ಇದು ಗುರುತಿಸುವಿಕೆ, ನೆನಪು ಎಂಬ ಅರ್ಥವನ್ನುಳ್ಳದ್ದು. ಆದ್ದರಿಂದ ನಾಟ್ಯ–ನೃತ್ಯಕ್ಕೇ ತಮ್ಮನ್ನು ತೆತ್ತುಕೊಂಡ, ಶ್ರದ್ಧಾವಂತ, ಹೊಸತನದ ಭರವಸೆಯುಳ್ಳ ಪ್ರಬುದ್ಧರೆನಿಸುವ ಯುವ ಕಲಾವಿದರನ್ನು ಪರಿಚಯಿಸುವ, ಗುರುತಿಸುವ ಅಂಕಣಕ್ಕೆ ಅಭಿಜ್ಞಾನವೆಂದು ನಾಮಕರಣ ಮಾಡಿ ನಮ್ಮ ನಡುವಿನ ಅಪೂರ್ವವೆನಿಸುವ ಪ್ರತಿಭೆಗಳ ಅನಾವರಣಕ್ಕೆ ಮುಂದಾಗುತ್ತಿದೇವೆ. ಅಂಕಣದ ಹೆಸರು ಮತ್ತು ಇಂತಹುದೊಂದು ಅಂಕಣ ಆರಂಭಿಸುವಲ್ಲಿ ಸೂಚಿಸಿದ ಶತಾವಧಾನಿ ಡಾ. ಆರ್. ಗಣೇಶ್ ಅವರಿಗೆ ಮೊದಲಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಅದಕ್ಕೆ ತಕ್ಕಂತೆ ಅಂಕಣದ ಈ ಸಂಚಿಕೆಯ ಅತಿಥಿಯೂ ಕೂಡಾ ಡಾ. ಗಣೇಶರ ನಾಯಕಾಭಿವ್ಯಕ್ತಿಯ ಅಂಕಣಸರಣಿಗೆ ಹೊಂದಿಕೆಯಾಗುವ ರೀತಿಯಲ್ಲಿ ಒದಗಿದ್ದಾರೆ ಎಂಬುದು ಇಲ್ಲಿನ ಮತ್ತೊಂದು ವಿಶೇಷ.

ಅಂದಹಾಗೆ ನಿಮ್ಮ ನಡುವಿನ ವಿಶೇಷ ನೃತ್ಯಪ್ರತಿಭೆಗಳನ್ನು ಅವರ ನುಡಿಗಳಲ್ಲಿ ಆಲಿಸಿ ಅಂದವಾಗಿ (ಕನ್ನಡ/ಇಂಗ್ಲೀಷ್) ಲೇಖನಿಯ ಅಚ್ಚೊತ್ತಿ. ಗುಣಮಟ್ಟದ ಬರೆಹಗಳಿಗೆ ಸದಾ ಅವಕಾಶಗಳಿವೆ.



ಚೇತನ್ ವರ್ಣ : ನಾಟ್ಯಶಾಸ್ತ್ರ ಪ್ರಸ್ತಾಪಿಸುವ ಚಾರಿ, ಕರಣಾದಿಗಳನ್ನು ಶಾಸ್ತ್ರೋಕ್ತವಾಗಿ ಕಲಿತು, ಲೀಲಾಜಾಲವಾಗಿ ನಾಟ್ಯದಲ್ಲಿ ಹೊಮ್ಮಿಸಬಲ್ಲ ಛಾತಿಯಿರುವ, ಚಾಲ್ತಿಯಲ್ಲಿರುವ ಕರ್ನಾಟಕದ ಏಕೈಕ ನಾಟ್ಯಕಲಾವಿದ. ದಿ॥ ಶ್ರೀಮತಿ ಸುಂದರೀ ಸಂತಾನಂ ಇವರ ಈ ಹೆಗ್ಗಳಿಕೆಯ ಹಿಂದಿನ ಸಾರಥಿ, ಗುರು. 1999ರಲ್ಲಿ ವಿಜಯಲಕ್ಷ್ಮಿ ಎಂಬವರು ಬೆಂಗಳೂರಿನ ಗಾಂಧಿಬಜಾರ್‌ನಲ್ಲಿ ಆಯೋಜಿಸಿದ್ದ ಸುಂದರೀ ಸಂತಾನಂ ಅವರ ಕಾರ್ಯಗಾರದಲ್ಲಿ ಪಾಲ್ಗೊಂಡ ಚೇತನ್ ಅವರಿಗೆ ತಮ್ಮ ಓದಿನ ಪರಿಣಾಮವಾಗಿ ಸಹಜವಾಗಿಯೇ ನಾಟ್ಯಶಾಸ್ತ್ರದ ಕರಣಗಳತ್ತ ಆಸಕ್ತಿ ಅರಳಿತ್ತು. ಅದಕ್ಕೆ ಪೂರಕವಾಗಿ ಶತಾವಧಾನಿ ಆರ್. ಗಣೇಶರ ನಾಟ್ಯಶಾಸ್ತ್ರದ ತರಗತಿಗಳು ಹೆಚ್ಚಿನ ಇಂಬನ್ನಿತ್ತವು. ಸುಂದರೀ ಸಂತಾನಂ ಅವರ ನಿಧನದ ಬಳಿಕ ಅವರ ಮಗಳು ಹರಿಣಿ ಉಳಿದ ಅಂಶಗಳನ್ನು ಕಲಿಸಿಕೊಡುವಲ್ಲಿ ಕಾರಣರಾದರು. ಇತ್ತೀಚೆಗೆ ನೃತ್ಯ ಸಂಶೋಧಕರ ಒಕ್ಕೂಟದಂತಹ ವೇದಿಕೆಗಳಲ್ಲಿ ಆಗುವ ಚರ್ಚೆ, ಸಂವಾದಗಳಿಂದ ಹೆಚ್ಚು ಆಯಾಮಗಳು ತನಗೆ ಒದಗುತ್ತಿವೆ ಎಂಬುದು ಅವರ ಸಂತಸ.

ಚೇತನ್ ಬೆಂಗಳೂರಿನ ಶಾರದಾಂಬ ಮತ್ತು ನರಸಿಂಹಮೂರ್ತಿಯವರ ಪುತ್ರ. ಕಿರಿಯ ಸಹೋದರ ಸಂತೋಷ್ ವರ್ಣ ಕಿರುತೆರೆ ಕಲಾವಿದ. ರಾ. ಸತ್ಯನಾರಾಯಣ ಅವರ ತಂಗಿ ಆರ್. ಸುಬ್ಬುಲಕ್ಷ್ಮಿ ಅವರ ಬಳಿ ಸಂಗೀತ ಪಾಠ ಹೇಳಿಸಿಕೊಳ್ಳುವಾಗ ದಿ.ವೆಂಕಟಲಕ್ಷ್ಮಮ್ಮ ಅವರ ಶಿಷ್ಯೆ ಬೀನಾ ಜೋಸೆಫ್ ಬಳಿ ನೃತ್ಯವನ್ನೂ ಕಲಿತವರು. ಭಾನುಮತಿ ಅವರ ಬಳಿ ಭರತನಾಟ್ಯ ನೃತ್ಯಾಭ್ಯಾಸ ಮಾಡಿದ್ದು; ಕಲಾಮಂಡಲಂ ಉಷಾದಾತಾರ್ ಬಳಿ ಮೋಹಿನಿಆಟ್ಟಂ ನೃತ್ಯಪ್ರಕಾರವನ್ನೂ ಅಭ್ಯಾಸಮಾಡಿ, ಅವರ ಬಳಿಯೇ ಭರತನಾಟ್ಯದಲ್ಲಿ ವಿದ್ವತ್ ಪರೀಕ್ಷೆಯನ್ನು ಪೂರ್ಣಗೊಳಿಸಿದ್ದಾರೆ. ಕಳೆದ 2 ವರ್ಷಗಳಿಂದ

**ಹೆಸರಾಂತ ನೃತ್ಯ ಕಲಾವಿದೆ ನಿರುಪಮಾ ರಾಜೇಂದ್ರರ ಬಳಿ ಕಥಕ್ ನೃತ್ಯಶಿಕ್ಷಣ ಪಡೆಯುತ್ತಿದ್ದು; ಅವರ 'ಅಭಿನವ' ನೃತ್ಯತಂಡದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಜೊತೆಗೆ ಬೆಂಗಳೂರಿನಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ 2–3 ಶಾಖೆಗಳಲ್ಲಿ ನೃತ್ಯಗುರುವಾಗಿ ಮಾರ್ಗದರ್ಶನವೀಯುತ್ತಿದ್ದಾರೆ. ಇವರು ಬೆಂಗಳೂರಿನ ಜೈನ್ ವಿದ್ಯಾಸಂಸ್ಥೆಯ ಪದವಿಪೂರ್ವ ಕಾಲೇಜಿನಲ್ಲಿ ಪ್ರಾಣಿಶಾಸ್ತ್ರದ ವಿಷಯಕ್ಕೆ ಉಪನ್ಯಾಸಕರು ಕೂಡ.**

**ಚೇತನ್ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೃತ್ಯ ವಿಭಾಗದಲ್ಲಿ ಎಂ.ಎ. ಸ್ನಾತಕೋತ್ತರ ಪದವಿ, ಪ್ರಾಣಿಶಾಸ್ತ್ರದಲ್ಲಿ ಎಂ.ಎಸ್.ಸಿ ಸ್ನಾತಕೋತ್ತರ ಪದವಿಯನ್ನು ಪಡೆದವರು. ಇವರು ಬೆಂಗಳೂರು ದೂರದರ್ಶನದ 'ಎ' ಗ್ರೇಡ್ ಕಲಾವಿದರು ಕೂಡ ಹೌದು. ಹೆಸರಾಂತ ಕಲಾವಿದ ಶ್ರೀಧರ್ ಇವರಿಗೆ ಸ್ಫೂರ್ತಿ. ಪರಮಗುರು ಡಾ. ಪದ್ಮಾ ಸುಬ್ರಹ್ಮಣ್ಯಂ ಅವರಿಂದ ಜರುಗಿದ ಕಾರ್ಯಾಗಾರವೊಂದರಲ್ಲಿ ತಮ್ಮ ಕರಣವಿನ್ಯಾಸವಿಸ್ತಾರಕ್ಕೆ ಪ್ರಶಂಸೆಯ ಮಾತುಗಳನ್ನು ಪಡೆದವರು. ಪುಣೆಯ ಸ್ವರಸಾಗರ ಉತ್ಸವ, ಕದಂಬೋತ್ಸವ, ಹಂಪಿಉತ್ಸವ, ಮೈಸೂರು ದಸರಾ ಉತ್ಸವ, ನಿಶಾಗಂಧಿ ಉತ್ಸವ, ಮೌಂಟ್‌ಅಬು ಉತ್ಸವ, 90ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಸಮ್ಮೇಳನೋತ್ಸವ ಮುಂತಾದವು ಇವರ ಪ್ರದರ್ಶನಕ್ಕೆ ಸಾಕ್ಷಿಯಾದ ವೇದಿಕೆಗಳು. ಗುರುದಕ್ಷಿಣಾಮೂರ್ತಿ, ನವರಸ ಕರ್ನಾಟಕ ಇತ್ಯಾದಿ ಹಲವಾರು ನೃತ್ಯ ನಾಟಕಗಳನ್ನು ಸಂಯೋಜಿಸಿದ್ದಾರೆ. ಇತ್ತೀಚೆಗಷ್ಟೇ ನಡೆದ ನಾಟ್ಯದೇಗುಲ ಸಂಸ್ಥೆಯ ನೃತ್ಯೋತ್ಸವದಲ್ಲಿ 'ನೃತ್ಯಲಾಂಚನ' ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಚಾರಿ, ಕರಣಾದಿಗಳನ್ನು ನೃತ್ಯದಲ್ಲಿ ಹೊಂದಿಸಿಕೊಳ್ಳುತ್ತಾ, ನೃತ್ಯದ ಸುಕುಮಾರ, ಉದ್ಧತ ಪ್ರಯೋಗವೆರಡರಲ್ಲೂ ಮಿಂಚುತ್ತಾ, ಪುರುಷ ನರ್ತಕರ ಸಮಸ್ಯೆಗಳೆಡೆಗೆ ಚಿಂತಿಸುತ್ತಾ ಹೊಸನೋಟವನ್ನೀಯುತ್ತಿರುವ ಚೇತನ್ ಇದೀಗ ನಮ್ಮ 'ಅಭಿಜ್ಞಾನ' ಅಂಕಣದ ಅತಿಥಿ.**



ನೃತ್ಯದ ಬಗ್ಗೆ ಆಸಕ್ತಿ ಹೇಗೆ ಬಂತೋ ಗೊತ್ತಿಲ್ಲ. ಸಣ್ಣದರಲ್ಲಿ ಏನಾದರೂ ವಿವರಿಸುವಾಗ ಅಭಿನಯ ಮಾಡಲು ಹೇಳಿದರೆ ಮಾಡುತ್ತಿದ್ದೆ. ಜೊತೆಗೆ ತಾಯಿ ಹಾಡುವವರು. ಸಿನೆಮಾಕ್ಕೆ ಕರೆದುಕೊಂಡು ಹೋಗುತ್ತಿದ್ದ ಕಾಲಕ್ಕೆ ಸ್ಕ್ರೀನ್ ತೆಗೆಯುವಾಗ ಬರುತ್ತಿದ್ದ ಹಾಡು 'ನಮೋ ವೆಂಕಟೇಶ' ಬರುತ್ತದಲ್ಲಾ ಅದು ನನಗೆ ಸ್ಫೂರ್ತಿ. ಅದಕ್ಕೆ ಡ್ಯಾನ್ಸ್ ಮಾಡುತ್ತಿದ್ದೆ. ಯಾರು ಹೇಳಿಕೊಟ್ಟರು ಅಂತ ಕೇಳಿದರೆ ಅದಕ್ಕೆ ನನ್ನ ಬಳಿ ಉತ್ತರವಿರುತ್ತಿರಲಿಲ್ಲ. ತೋಚಿದ್ದನ್ನು ಮಾಡುತ್ತಿದ್ದೆ, ಅಷ್ಟೇ.

**ಅಭಿವ್ಯಕ್ತಿ ಸಮಸ್ಯೆ ಪುರುಷರಿಗೆ ಹೆಚ್ಚು...**

..ಪುರುಷ ನರ್ತಕರಿಗೆ ಅಭಿವ್ಯಕ್ತಿಯಲ್ಲಿ ಬಹಳ ಸಮಸ್ಯೆಗಳಿವೆ. ಪ್ರಾಥಮಿಕ ಹಂತದಲ್ಲಿ ಗುರುಗಳು ಹೇಳಿಕೊಟ್ಟದ್ದನ್ನಷ್ಟೇ ಮಾಡುತ್ತೇವೆ. ಆದರೆ ನಾವು ನಾವೇ ಕೊರಿಯೋಗ್ರಫಿ ಮಾಡಿಕೊಂಡು ಪ್ರದರ್ಶನ ಕೊಡುವ ಹಂತಕ್ಕೆ ಬಂದಾಗ ನಾವು ಮಾಡೋದು ನಮಗೆ ಕಾಣದಿರುವಾಗ ಯಾವ ರೀತಿಯಲ್ಲಿ ಅಭಿವ್ಯಕ್ತಿ ಮಾಡಬೇಕು, ಹೇಗಿರಬೇಕು ಎಂಬಿತ್ಯಾದಿ ನೆಲೆಯ ಮಾರ್ಗದರ್ಶನದ ಕೊರತೆ ಕಾಡುತ್ತದೆ. ಇಂತಹ ಒಂದು ಸಮಸ್ಯೆ ಮೀಸೆಯಿಂದಲೇ ಮೊದಲು ಪ್ರಾರಂಭವಾಗುತ್ತದೆಯೆಂದರೆ ಅದು ತಪ್ಪಲ್ಲ. ಮೀಸೆಯಿಡುವುದೋ? ಬೇಡವೋ? ಪ್ರದರ್ಶನದ ಸಮಯದಲ್ಲಿ ನಿಲುವಂಗಿ ಹಾಕಬೇಕೋ? ಬೇಡವೋ..ಇತ್ಯಾದಿ. ಜೊತೆಗೆ ಲಾಸ್ಯಭರಿತವಾಗಿರುವುದನ್ನು ಮಾಡಿದರೆ ಅದು ಎಷ್ಟು ನರ್ತಕರಿಗೆ ಒಪ್ಪುತ್ತದೆಯೆಂಬುದು ಒಂದಾದರೆ ಉದ್ಧತದಲ್ಲಿ ಆರ್ಭಟ ಹೆಚ್ಚು ಮತ್ತು ಅದು ಪುರುಷರಿಗೆ ಹೊಂದುತ್ತದೆ ಎಂಬ ಅಭಿಪ್ರಾಯಗಳಿಂದಾಗಿ ಬರಬರುತ್ತಾ ಉದ್ಧತವಾದ ನೃತ್ಯಗಳನ್ನು ಮಾಡಹೊರಟರೆ ವೈವಿಧ್ಯತೆಯೇ ಇಲ್ಲವೆಂಬಂತಾಗಿರುವುದು ಮತ್ತೊಂದು ಸಮಸ್ಯೆ. ಒಟ್ಟಿನಲ್ಲಿ ನರ್ತಕರಿಗೆ ಚಲನೆಗಳ ಕೊರತೆಯಿದೆ; ಸ್ತ್ರೀಯರಷ್ಟು ಚಲನೆಗಳಲ್ಲಿ ಸ್ವಾತಂತ್ರ್ಯ ಇಲ್ಲ ಎನ್ನುತ್ತಾರೆ.

ಜೊತೆಗೆ ಸೂಕ್ತವೆನಿಸುವ ಸಾಹಿತ್ಯ ಕೊರತೆಯೂ ನರ್ತಕರನ್ನು ಕಾಡುತ್ತದೆ. ಭರತನಾಟ್ಯದಂತಹ ನೃತ್ಯದಲ್ಲಿ ಬಹಳಷ್ಟು ಸಾಹಿತ್ಯಗಳು ನಾಯಿಕಾಪ್ರಧಾನವಾಗಿಯೇ ಇರುತ್ತವೆ. ಇದರೊಂದಿಗೆ ಮತ್ತೊಂದು



ಕೊರತೆಯೆಂದರೆ ಪುರುಷ ಕಲಾವಿದರ ಆಹಾರ್ಯಾಭಿನಯ ಸೊರಗಿರುವುದು. ನನಗಂತೂ ಸ್ತ್ರೀಯರ ವೇಷಭೂಷಣಗಳಷ್ಟು ಪುರುಷರ ಆಹಾರ್ಯ ಶ್ರೀಮಂತವಾಗಿಲ್ಲ ಎನಿಸುತ್ತದೆ. ನಾನು ಕಂಡ ಪ್ರಕಾರ ಬೆಂಗಾಲಿ ನರ್ತಕರು ಹೆಚ್ಚಿನ ಆಹಾರ್ಯ ಸೌಂದರ್ಯ ಹೊಂದಿದ್ದಾರೆ.

**ಸಮಸ್ಯೆಗೆ ಪರಿಹಾರವಿದೆ...**

ಸಾಕಷ್ಟು ಅಧ್ಯಯನ ಮಾಡಿ, ಸಾಹಿತ್ಯ ಪತ್ತೆ ಹಚ್ಚಿ ಹಿರಿಯರೊಂದಿಗೆ ಸಂವಾದ ನಡೆಸಿ, ನಾಲ್ಕೈದು ಜನರ ಮುಂದೆ ರಿಹರ್ಸಲ್ ಮಾಡಿದಾಗ ಖಂಡಿತಾ ಪುರುಷಪ್ರಧಾನವಾಗಿರುವಂತಹ ನೃತ್ಯಬಂಧಗಳನ್ನು ಹುಟ್ಟುಹಾಕಿ ಪ್ರದರ್ಶನಕ್ಕೆ ತರಬಹುದು.

ವೈವಿಧ್ಯಮಯವಾದ ಕಿರೀಟಗಳು, ಕೇಶಾಲಂಕಾರ, ಒಡವೆ ಇತ್ಯಾದಿಯಾಗಿ ಆಹಾರ್ಯ ಪದ್ಧತಿಗಳು ನರ್ತಕರಿಗೆಂದೇ ಹೊರಬಂದರೆ ನರ್ತಕರ ಆಹಾರ್ಯಾಭಿನಯ ಮತ್ತಷ್ಟು ಚೆನ್ನಾಗಿರುತ್ತದೆ.

ಹೌದು, ಭರತನಾಟ್ಯದಂತಹ ನೃತ್ಯದಲ್ಲಿ ಪುರುಷರು ಪದ ಜಾವಳಿಗಳ ಬದಲಾಗಿ ದೇವರನಾಮಗಳನ್ನು ಆರಿಸುವುದು ಸುಲಭದ ಕೆಲಸ. ಆದರೆ ಗಂಡಸಿನ ಬೇರೆ ಬೇರೆ ಮನಸ್ಥಿತಿ, ಭಾವಗಳನ್ನು ತೋರಿಸುವ ರಚನೆಗಳು ಬಂದರೆ ಅಭಿವ್ಯಕ್ತಿಯೂ ಹೆಚ್ಚಾಗುತ್ತದೆ. ಉದಾಹರಣೆಗೆ ಹೇಳುವುದಿದ್ದಲ್ಲಿ ಜಿಪುಣ ಗಂಡನ ಜಗಳ, ಅವನ ನಡೆನುಡಿ, ಅದಕ್ಕೆ ಹೆಂಡತಿಯ ಪ್ರತಿಕ್ರಿಯೆ ಇತ್ಯಾದಿ.. ಯೋಚಿಸಿ, ಚರ್ಚಿಸಿದರೆ ಇನ್ನಷ್ಟು ಹೊಸತೆನಿಸುವ ವಸ್ತುಗಳು ಹೊರಬರುತ್ತವೆ.

ಪುರುಷರು ಉದ್ಧತ ಚಲನೆಗಳನ್ನೇ ಮಾಡಬೇಕೆಂಬ ನಿಯಮವೇನೂ ಇಲ್ಲ. ನರ್ತಕರು ಉದ್ಧತದಷ್ಟೇ ಆರಾಮವಾಗಿ ಸುಕುಮಾರ ಅಭಿನಯವನ್ನೂ ಮಾಡಬಹುದು ಮತ್ತು ಎರಡನ್ನೂ ಹದವಾಗಿ ತೂಗಿಸಿಕೊಂಡು ಹೋಗಲೂಬಹುದು. ಆದರೆ ಮಾಡುವವರ ಮತ್ತು ನೋಡುವವರ ದೃಷ್ಟಿ, ತಿಳಿವಳಿಕೆ, ಅಭಿನಯಾಂಶಗಳಿಂದ ಸೌಂದರ್ಯ ನಿರ್ಧರಿತವಾಗುತ್ತದೆ. ಪ್ರೇಕ್ಷಕರಲ್ಲಿ ಈಗಾಗಲೇ 'ಇಂಥದ್ದೇ ಮಾದರಿಯಲ್ಲಿ ಪುರುಷ ನರ್ತಕರು ನರ್ತಿಸಬೇಕು' ಎಂಬ ಇರಾದೆ ಇದ್ದರೆ ಅವರನ್ನು ಶಿಕ್ಷಿತರಾಗುವಂತೆ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾಗುತ್ತದೆ.

ಈ ನಿಟ್ಟಿನಲ್ಲಿ ನನ್ನ ತಂದೆ ತಾಯಿ ತಮ್ಮನ ಸಹಕಾರ ಮತ್ತು ಅವರ ನೋಟದಿಂದಾಗಿ ಹೇಗೆ ಪುರುಷಪ್ರಧಾನವಾಗಿ ನರ್ತಿಸುವಾಗ ಬದಲಾವಣೆ ಮಾಡಬೇಕು ಎಂದು ಕಂಡುಕೊಂಡಿದ್ದೇನೆ; ಮತ್ತು ಅವರ ಸಲಹೆಗಳಿಂದ ನನ್ನ ನೃತ್ಯ ಸೊಗಸಾಗಿಯೂ ಕಾಣಿಸಿದೆ. ಎಷ್ಟೋ ಸಹೃದಯರು 'ನಿಮ್ಮ ನೃತ್ಯ ತುಂಬಾ ವಿಭಿನ್ನವಾಗಿದೆ, ಕ್ಯಾಚೀ ಆಗಿದೆ' ಎಂಬ ಪ್ರಶಂಸೆಗಳನ್ನೂ ಕೊಟ್ಟಿದ್ದಾರೆ.

**ನರ್ತಕರ ನಿಜಜೀವನದ ಬಾಡಿಲ್ಯಾಂಗ್ವೇಜ್ ಪುರುಷಸಹಜವಾಗಿರಬೇಕು..**

..ನರ್ತನದ ಥರವೇ ಹಾವಭಾವಗಳನ್ನು ನಿಜಜೀವನದಲ್ಲಿಯೂ ಪುರುಷರು ಮಾಡಿದಲ್ಲಿ ಜನರು ಲಾಲಿತ್ಯ, ಸುಕುಮಾರ ಜಾಸ್ತಿ ಅಂತೆಲ್ಲಾ 'ಒಂದು ಬಗೆಯ ಜನರಲೈಸ್ಡ್ ಒಪೀನಿಯನ್' ಕೊಡ್ತಾರೆ. ಮಾಮೂಲಿಯಾಗಿ ನಡೆದುಕೊಂಡು ಹೋಗುವಾಗಲೂ 'ನಾನು ಡ್ಯಾನ್ಸರ್' ಅಂತ ತೋರಿಸಿಕೊಳ್ಳುವುದು ತಪ್ಪಾಗುತ್ತದೆ. ನೃತ್ಯದ ವೇಳೆಯಲ್ಲಿ ಬಳಸುವ ಬಾಡೀ ಲಾಂಗ್ವೇಜ್‌ನ್ನೆ ನಿಜಜೀವನದಲ್ಲಿ ಬಳಸಿದರೆ ಅತಿಯಾಗಿ ಕಾಣುತ್ತದೆ. ಹಾಗಂತ ನೃತ್ಯ ಕಲಾವಿದರಿಗೆ ಸುಕುಮಾರ, ಲಾಲಿತ್ಯಭಾವ ಇರುವುದಿಲ್ಲವೆಂತಲ್ಲ. ಆದರೆ ಅದು ನಮ್ಮ ಹಿಡಿತದಲ್ಲಿರಬೇಕು. ನಮ್ಮನ್ನು ನಾವು ಮೌಲ್ಡ್ ಮಾಡಿಕೊಳ್ಳುವುದು ಗೊತ್ತಿರಬೇಕು. ನಾರ್ಮಲ್ ಆಗಿ ಪ್ರತಿಕ್ರಿಯೆ ಕೊಡಬೇಕೇ ವಿನಾ ರಂಗದ ಮೇಲಿರುವಂತೆ ಅಲ್ಲ. ನಡಿಗೆಯಲ್ಲಿ ಮಾತನಾಡುವಾಗ ಗಂಡಸರ ಸ್ವಭಾವತಃ ಗುಣಗಳನ್ನು ಅಂದರೆ ಜೋರು, ದಾರ್ಢ್ಯತೆ, ಒರಟುತನಗಳನ್ನು

ತಂದುಕೊಳ್ಳಬೇಕು. ರಂಗದ ಮೇಲೆಯೇ ಪಾತ್ರಗಳನ್ನು ತತ್‌ಕ್ಷಣ ಮಾತ್ರದಲ್ಲಿ ಬದಲಾಯಿಸಿಕೊಳ್ಳುವ ಸಾಮರ್ಥ್ಯವಿರುವ ಕಲಾವಿದನಿಗೆ ರಂಗದಿಂದ ಹೊರಬಂದ ನಂತರವೂ ಅದು ಸಾಧ್ಯವಾಗಲಾರದೇ? ಆದ್ದರಿಂದ ಯಾವುದೇ ನೈಜಪ್ರತಿಕ್ರಿಯೆ ನೀಡುವ ಮೊದಲು ನರ್ತಕರು ಯೋಚಿಸಬೇಕು.

### ಮಾಧ್ಯಮಗಳಿಗೆ ಕರ್ತವ್ಯ ಇದೆ...

ಇತ್ತೀಚಿನ ಸಿನೆಮಾಗಳಲ್ಲಿ ನಟರು ನರ್ತಕರನ್ನು ತುಂಬಾ ಕೆಟ್ಟದಾಗಿ ಬಿಂಬಿಸುತ್ತಾರೆ. ಗಾಡ್‌ಫಾದರ್, ರಾಮ್‌ನಂತಹ ಚಿತ್ರಗಳಲ್ಲಿ ಉಪೇಂದ್ರ, ಅರುಣ್‌ಸಾಗರ್ 'ಹಾಸ್ಯಕ್ಕೆ ವಸ್ತು' ಅನ್ನುವ ರೀತಿಯಲ್ಲಿ ನರ್ತಕರನ್ನು ಬಿಂಬಿಸಿದ್ದಾರೆ. ಅಂತಹ ಗುಣಗಳುಳ್ಳ ನರ್ತಕರು ಒಬ್ಬರಿಬ್ಬರು ನೃತ್ಯಲೋಕದಲ್ಲಿ ಇರಬಹುದೇನೋ! ಆದರೆ ಎಲ್ಲರಿಗೂ ಇದು ಅನ್ವಯವಾಗುವುದಿಲ್ಲ ಅಲ್ಲವೇ? ಇಂತಹ ಸಿನೆಮಾಗಳು ಜನರ ಮನಸ್ಸನ್ನು ತುಂಬಾ ಪ್ರಭಾವಿಸುತ್ತದೆ. ಮಾತ್ರವಲ್ಲ ನರ್ತಕರ ಜೀವನಕ್ಕೆ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಮಾಧ್ಯಮಗಳಿಗೆ ಜವಾಬ್ದಾರಿ ಇದೆಯೆಂಬುದನ್ನು ಮರೆಯಬಾರದು.

### ಪುರುಷ ನರ್ತಕರಿಗೆ ಮಾನ್ಯತೆ ಕಡಿಮೆ...

ಸ್ತ್ರೀಯರಿಗೆ ಹೋಲಿಸಿದರೆ ಕರ್ನಾಟಕದಲ್ಲಿ ನರ್ತಕರಿಗೆ ಮಾನ್ಯತೆ ಇರುವುದು ಪ್ರತಿಶತಃ 2 ಮಾತ್ರ. ಒಂದೆಡೆ ವೇದಿಕೆ, ಅವಕಾಶಗಳ ಸಮಸ್ಯೆಯಾದರೆ ಮತ್ತೊಂದೆಡೆ ಶಿಷ್ಯಂದಿರ ಕೊರತೆ. ಮಹಿಳಾ ಶಿಕ್ಷಕರ ಬಳಿ ಬರುವಷ್ಟು ಪುರುಷ ನರ್ತಕರ ಬಳಿ ವಿದ್ಯಾರ್ಥಿಗಳು ಇರುವುದಿಲ್ಲ. ನಮ್ಮ ಬಯೊಡೇಟಾ ತೆಗೊಳ್ಳುವ ಮಟ್ಟಿಗೆ ಪ್ರಸ್ತುತಿಯ ಅವಕಾಶಗಳು ಸಿಗುವುದಿಲ್ಲ. ಅವಕಾಶಗಳು ಬಂದರೂ ನಿರ್ದಿಷ್ಟ ರೀತಿಯಲ್ಲಿಯೇ ಇರಬೇಕೆಂಬ ಶಿಸ್ತು, ಒತ್ತಡ ಹೆಚ್ಚು. ಜೊತೆಗೆ ಸಮಯದ ಅಭಾವವೂ, ಬಂಡವಾಳದ ಸಮಸ್ಯೆಯೂ ನನ್ನನ್ನು ಕಾಡುತ್ತಿದೆ. ಹೀಗಾದಾಗ ಅಸ್ತಿತ್ವಕ್ಕಾಗಿ ಕಲೆಯ ಮಾರುಕಟ್ಟೆ ಅನಿವಾರ್ಯವಾಗುತ್ತದೆ.

### ಕರಣಗಳನ್ನು ಕಲಿತುಕೊಳ್ಳಿ...

ಸ್ತ್ರೀಯರೇ ಆಗಿರಲಿ ಅಥವಾ ಪುರುಷರೇ ಆಗಲಿ..ಕರಣಗಳನ್ನು ಉದ್ಧತವಾಗಿಯೂ ಮಾಡಬಹುದು; ಸುಕುಮಾರವಾಗಿಯೂ ಮಾಡಬಹುದು. ಆದ್ದರಿಂದ ನಾಟ್ಯಶಾಸ್ತ್ರೀಯ ಅಂಶಗಳನ್ನು ಅರಿತು ಅಳವಡಿಸಿಕೊಂಡರೆ ಪುರುಷ ನರ್ತಕರಿಗೆ ಖಂಡಿತವಾಗಿಯೂ ಚಲನೆಗಳ ವಿಷಯದಲ್ಲಿ ಬರ ಇಲ್ಲ ಎಂಬುದು ನಾನು ಕಲಿತು ಅರಿತ ಅಂಶ. ಕರಣಗಳನ್ನು ಕಲಿತುಕೊಳ್ಳುವುದು ಒಳ್ಳೆಯದು. ಇದರಿಂದ ದೇಹ ದೃಢವಾಗುತ್ತದೆ ಮತ್ತು ಹರಹು, ಅದರೊಳಗಿನ ರಹಸ್ಯ, ವೈವಿಧ್ಯತೆಗಳ ಪರಿಚಯವಾಗುತ್ತದೆ. ಕರಣಗಳನ್ನು ಕಲಿತರೆ ಭರತನಾಟ್ಯ ಮಾತ್ರವಲ್ಲ, ಬೇರಾವ ನೃತ್ಯಪದ್ಧತಿಗಳಿಗೂ ಅದನ್ನು ಅನುಕೂಲಕರವಾಗಿ ಬಳಸಬಹುದು. ನನ್ನ ವಿಷಯವನ್ನೆ ತೆಗೆದುಕೊಂಡರೆ ಮೊದಮೊದಲು ಕರಣಗಳನ್ನು ಕಲಿಯುವಾಗ ಆಸಕ್ತಿ ಇತ್ತು. ಕಲಿತು ಹೊರಬಂದ ನಂತರ ಅದರ ಬಳಕೆ ಹೇಗೆ ಎಂಬುದೇ ಚಿಂತೆಯಾಯಿತು. ಆದರೆ ಕ್ರಮೇಣ ಅಭ್ಯಾಸ ಮತ್ತು ನಿರಂತರ ನೋಟವೇ ಅದರ ಬಳಕೆಗೆ ದಾರಿ ಹಾಕಿಕೊಟ್ಟಿತು. ಸದ್ಯಕ್ಕೆ ಸಂಗೀತ ಸ್ವರಗಳನ್ನು ಬೇರೆ ಬೇರೆರಾಗದಲ್ಲಿ ಇಟ್ಟುಕೊಂಡು ಆ ರಾಗಗಳ ಭಾವ, ಮೂಡ್, ಟೆಂಪ್ಲೆಟ್ಸ್ ಇಟ್ಟುಕೊಂಡು ಕರಣಗಳನ್ನು ಕಂಪೋಸ್ ಮಾಡಬೇಕೆಂದಿದ್ದೇನೆ.



ಆಜೀವಸದಸ್ಯರಾಗಿ ನಮ್ಮ ಬಳಗದಲ್ಲಿ ಮತ್ತಷ್ಟು ಮಂದಿ...
**ಪುರುಷೋತ್ತಮ ಭಟ್**
ಮಾಲೀಕರು, ಗಣೇಶ್ ಮೆಡಿಕಲ್ಸ್, ಮಡಿಕೇರಿ, ಕೊಡಗು

**ದೀವಟಿಗೆ**

(ಅರ್ಥಗರ್ಭಿತವೆನಿಸಿದ, ವಿಮರ್ಶೆಗೆ ಔಚಿತ್ಯವೆನಿಸುವ, ಗುಣಮಟ್ಟದ ಕಾರ್ಯಕ್ರಮಗಳ ಸಾಧ್ಯಾಸಾಧ್ಯತೆಗಳ ಬಗೆಗೊಂದು ಝಲಕ್. ಚಿಕ್ಕ, ಚೊಕ್ಕ, ಅಚ್ಚುಕಟ್ಟು, ಅರ್ಥಪೂರ್ಣ, ಪೂರ್ವಾಗ್ರಹ–ಕ್ಲೀಷೆ– ಸ್ಥಾನಬೇಧ ರಹಿತ ವರದಿಯೆನಿಸದ ಔಚಿತ್ಯಪೂರ್ಣ ವಿಮರ್ಶೆಗಳಿಗೆ ಸದಾ ಸ್ವಾಗತವಿದೆ. ಅಂತೆಯೇ ಗುಣಮಟ್ಟದ ಯೋಜನೆಗಳು, ಕಾರ್ಯಕ್ರಮಗಳ ಬಗೆಗೂ ನೀವು ಬೆಳಕು ಬೀರಬಹುದು. ಬರೆಯುವವರಿಗೆ ವಯಸ್ಸು–ಸ್ಥಾನ–ಪ್ರದೇಶದ ಪರಿಮಿತಿಯಿರುವುದಿಲ್ಲ. ವಿಮರ್ಶಾ ಕ್ಷೇತ್ರದ ಗುಣಮಟ್ಟ ಕುಸಿಯುತ್ತಿರುವ ಮಧ್ಯೆಯೂ ಉತ್ತಮ ವಿಮರ್ಶೆಗಳನ್ನು ರೂಢಿ ಮಾಡಿಸುವುದಷ್ಟೇ ನೂಪುರದ ಗುರಿ. ಆ ಮೂಲಕ ನರ್ತನದ ನಡೆಗಳಿಗೆ ದೀವಟಿಗೆಯಾಗಬಲ್ಲುದು ಎಂಬುದು ನಮ್ಮ ಆಶಯ. ಹೀಗೆ ವಿಮರ್ಶೆಯನ್ನು ನೀಡುವವರನ್ನು ವಾರ್ಷಿಕ ವಿಮರ್ಶಾ ಪ್ರಶಸ್ತಿಯ ನಾಮನಿರ್ದೇಶನಕ್ಕೆ ಪರಿಗಣಿಸಲಾಗುವುದು.)

# ಅವ್ಯವಧಾನದಿಂದ ತಪ್ಪಿದ ನಾಟ್ಯಾಂಗಣದ ಸೌಂದರ್ಯಶಿಲ್ಪ

– ವಿದ್ವಾನ್ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಬೆಂಗಳೂರು

ಸವಿಯುವ ಸಂಕಟವೇ ಅಂತಹದ್ದು. ಮಧುರಾದಿ ರಸಗಳು ಹದಗೊಂಡು ಸಮಪಾಕವಾಗಿ ಹೆರೆಗಟ್ಟುತ್ತದೆ, ಹೆರೆಗಟ್ಟುತ್ತಿವೆ ಎಂದು ಅಂದುಕೊಳ್ಳುತ್ತಿರುವಾಗ ಅಲ್ಲಲ್ಲಿ ಅಲ್ಲಲ್ಲಿ ಕಾವಿನ ಏರುಪೇರಿನಿಂದ ರುಚಿಯು ಮಾರ್ಗಾಂತರವಾದರೆ ಸ್ವಾದವು ಚೆದುರುತ್ತದೆ; ಚೆಲ್ಲುವರಿಯುತ್ತದೆ. ಹೂವೂ ಇದೆ, ಗಟ್ಟಿದಾರವೂ ಇದೆ, ನುರಿತ ಮಾಲೆಗಾರರೂ ಇದ್ದಾರೆ. ಆದರೆ ತುಸು ಜೊಂಪಿನಿಂದ ಹೆಣಿಗೆ ಜಾಳಾದರೆ ಮಾಲೆ ತಾನು ಪಡೆಯಬಹುದಾದ ಕಾಂತತ್ವವನ್ನು ಕಡಿಮೆಗೊಳಿಸಿಕೊಳ್ಳುತ್ತದೆ. ಇತ್ತೀಚೆಗೆ (14 ಸೆಪ್ಟೆಂಬರ್ 2012) ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ ಭರತನೃತ್ಯಶಾಲೆಯವರ 'ನಾಟ್ಯಾರ್ಪಣ'ವನ್ನು ಕಂಡಾಗ ಆದ ಅನುಭವ ಅಂತಹದೇ. ಎಲ್ಲ ಇದ್ದು ಮುದ್ದಂತೆನಿಸಿದೆ ಹೋಯಿತೇ ಎಂಬ ಕಿಂಚಿತ್‌ಕ್ಷೋಭೆ ಸಾನುಕಂಪವಾಗಿ ಸುಳಿದೋಡಿತು.

ನೃತ್ಯಗುರು ದಿವಂಗತ ಸುಂದರೀ ಸಂತಾನಂ ಅವರ ಆಪ್ತಸ್ಮೃತಿಯಲ್ಲಿ ಮೂಡಿಬಂದ 'ನೃತ್ಯಾರ್ಪಣ', ಅವರ ಶಿಷ್ಯೆಯರೇ ಸೇರಿ ಸಲ್ಲಿಸಿದ್ದು; ಸುಂದರಿಯವರು ಅಕ್ಷರಶಃ ನೆತ್ತರು ಬಸಿದು ಶೋಧಿಸಿ ಸಾಧಿಸಿದ ದೇಸೀಕರಣಗಳ ಮೊದಲ ಪ್ರಸ್ತುತಿಯೂ ಸೇರಿದಂತೆ ಪೂರ್ವಾಂಗದಿಂದ ತಿಲ್ಲಾನದ ವರೆಗೆ ವಿವಿಧ ಭಾವಾಸ್ವದವಾದ ನಾಟ್ಯಸಂಕಥನ ಜೋಡುಗೊಂಡಿತ್ತು. ಆರಂಭದಲ್ಲಿ ನಡೆಯಿಟ್ಟ ದೇಸೀಕರಣ, ನೃತ್ಯ ಜಗತ್ತಿನಲ್ಲಿ ಮೊಟ್ಟಮೊದಲಬಾರಿ ಮೈಯೊಡೆಯುತ್ತಿರುವುದರಿಂದ ಅದರ ಕುರಿತು, ಅದರ ಸಂರಚನೆಯ ಕುರಿತು, ಅದರ ವಿಭಿನ್ನತೆಯ ಕುರಿತು, ಅದರ ವಿನ್ಯಾಸದ ಕುರಿತು ಪ್ರೇಕ್ಷಕರು ಮೂಢಕರಣರೇ ಆಗಿದ್ದರು. ಮಾರ್ಗ ಹಾಗೂ ದೇಸೀಕರಣಗಳ ಮೂಲಭೂತ ವ್ಯತ್ಯಾಸ ವಿನಿಯೋಗದ ಬಗ್ಗೆ ವಿರಳವಾಗಿಯಾದರೂ ಮಾಹಿತಿ ನೀಡಬಹುದಿತ್ತು. ಒಂದು ನಾಟ್ಯಪ್ರಯೋಗ ಪಂಡಿತವರ್ಯರಿಗಷ್ಟೇ ಮೀಸಲಿಲ್ಲವಷ್ಟೇ! ಅಂದು ಪ್ರಯೋಗಿಸಿರಬಹುದಾದ ದೇಸೀಕರಣಗಳಲ್ಲಿ ಕೆಲವೇ ಕೆಲವುಗಳ ಹೆಸರನ್ನಾದರೂ ಪ್ರಕಟಿಸಬಹುದಿತ್ತು. ಶಿಷ್ಟವೆನಿಸದ ಆಂಗಿಕ ಚಲನೆಗಳನ್ನು ಒಳಗೊಂಡ ಒಂದಷ್ಟು ಕುತೂಹಲ ಹುಟ್ಟಿಸುವ ಗತಿ–ಪ್ಲುತಿಗಳು ಇದ್ದುದು ಹೌದಾದರೂ, ದೇಸೀಕರಣದ ಅಧಿಕೃತತೆಯ ಕುರಿತು ಖಚಿತ ಮಾಹಿತಿಯನ್ನು ಪ್ರೇಕ್ಷಕರಿಗೆ ಒದಗಿಸಿದ್ದಿದ್ದರೆ, ಸಂಶೋಧನೆಯ ಮೌಲ್ಯದ ಮಹತ್ತು ಮನವರಿಕೆಯಾಗುತ್ತಿತ್ತು. ಇನ್ನೊಂದು ಗೊಂದಲದ ಸಂಗತಿಯೆಂದರೆ ನಾಲ್ಕು ಕಲಾವಿದೆಯರು ಗುಂಪುಗುಂಪಾಗಿ ಇದನ್ನು ಪ್ರಸ್ತುತಪಡಿಸಿದ್ದು. ಒಬ್ಬೊಬ್ಬರೇ ಹಂಚಿಕೊಂಡು ನರ್ತಿಸಿದ್ದರೆ, ನೋಡುಗನ ಕಣ್ಮನಗಳಲ್ಲಿ ಅಚ್ಚು ಇನ್ನಷ್ಟು ಗಟ್ಟಿಯಾಗಿ ಊರುತ್ತಿತ್ತು. ಸಮೂಹನೃತ್ಯ ಏನಿದ್ದರೂ 'ಸಾಗಹಾಕುವ' ವ್ಯವಹಾರತಂತ್ರ ಅಷ್ಟೇ! ನಾಲ್ಕೂ ಕಲಾವಿದೆಯರು ರಂಗದಲ್ಲಿ ನೃತ್ಯಶೀಲರಾಗಿರುವಾಗ ಯಾರ ಭಾವ–ಭಂಗಿ ಹೇಗೆ ಎಂಬುದನ್ನು ಅರಸುವುದರಲ್ಲೇ ಪ್ರೇಕ್ಷಕ ಅರೆಜಡ್ಡಾಗುತ್ತಾನೆ. ಪರಿಣಾಮವಾಗಿ ಯಾವ ಕಲಾವಿದೆಯ ಲಾಸ್ಯಾಕರ್ಷಣ ಕಣ್ಣಿಗೆ ಕೊಕ್ಕೆ ಹಾಕುತ್ತದೋ ಅಲ್ಲೇ ಪ್ರೇಕ್ಷಕ ನೆಲೆನಿಲ್ಲುತ್ತಾನೆ. ಕಲಾಕಾರರ ಪರಿಶ್ರಮ ಬಿಡಿಬಿಡಿಯಾಗಿ ದಾಖಲಾಗದೇ

ಅವರು ಮಾಡಿದ ಕಠಿನಾಭ್ಯಾಸ ಜಲಲಿಪಿಯಾಗುತ್ತದೆ. ಈ ಸೋರಿಕೆಯನ್ನು ತಡೆಗಟ್ಟಿದ್ದರೆ ಪ್ರದರ್ಶನ ಪ್ರಮಾಣಭೂತವಾಗುತ್ತಿತ್ತು.

ನಾಚ್ ನಟುವರ್, ಮೋಹಿನಿ ಭಸ್ಮಾಸುರ, ಬೆಳದಿಂಗಳು, ಮೋಘಾಲಂಕರಣ (ಹಾಸ್ಯರಸದ ತೆಲುಗು ಪದ್ಯ) ಪ್ರಸಂಗಗಳು ಕಥಾರೇಖಾತ್ಮಕವಾದವುಗಳಾಗಿ ಭರತನೃತ್ಯದ ಎಲ್ಲಾ ಮಗ್ಗುಲುಗಳನ್ನು ಒಳಗೊಂಡಿದ್ದು ; ಈ ಪ್ರಸ್ತುತಿಗಳಲ್ಲಿ 'ಪದ್ಮಾ'ಯನದ ಛಾಪಿನ ಹೊಳಪು ಸ್ಪಷ್ಟವಾಗಿ ಕಾಣುತ್ತಿತ್ತು. ತತ್ರಾಪಿ ಚಾರಿ ರೇಚಿತಗಳ ಮೂಲಕ ಹಾಯಿಸುವ ನೃತ್ಯಗಮಕದ ಬಳುಕು ವಾಹ್ ವಾಹ್ ಉದ್ಗಾರದ ಉಜಿರಾಗಿತ್ತು. ಆದರೆ ಸಾತ್ತ್ವಿಕಕ್ಕೆ ವ್ಯವಧಾನದ ಸಾಥಿ ಆಗದೇ ಭಾವಸಂವಹನದಲ್ಲಿ ತಡೆಯೊಡ್ಡುಗಳಾಗಿ ರಸವಾಗುವ ಹದದ ಹಂತದಲ್ಲಿ ಹಾರುಹೊಡೆಯುತ್ತಿತ್ತು.

'ಆ ವಿವರ ನಿನ್ನೊಳಗೂ' ಎನ್ನುವ ಮೂಲಸೂತ್ರ ಅಭಿನಯಕ್ಕೂ ಅನ್ವೇಯ. ಸಂದರ್ಭ, ಪಾತ್ರ, ಭಾವಗಳ ಸಮೀಕರಣ ಅಂತರಂಗದಲ್ಲಾಗದೆ ಮುಖರಂಗದಲ್ಲಿ ಆವಿರ್ಭವಿಸುವುದಿಲ್ಲ. ಅಷ್ಟರಮಟ್ಟಿನ ಕಲಾಕಾಲವನ್ನು ಈ ಅಂತಃಪ್ರಕ್ರಿಯೆಗಾಗಿ ಮೀಸಲಿಟ್ಟುಕೊಳ್ಳದಿದ್ದರೆ ಭಾವವು ರಸವಾಗಿ ಪ್ರೇಕ್ಷಕನಲ್ಲಿ ಸಂವಹಿಸುವುದೂ ಇಲ್ಲ. ಇದೇ ವ್ಯವಧಾನ ತಾನೇ?

ಭಸ್ಮಾಸುರ ಮೋಹಿನಿ ನೂರಾರು ಸಂಚಾರಿಗಳಿಗೆ ತೆರೆಬಾಗಿಲಾಗುವ ಸುಂದರ ರೂಪಕ. ಒಂದೊಂದು ಪಾತ್ರವೂ ಕಲಾವಿದನಿಗೆ ಸೂಳ್ಕಣಿಗಳನ್ನು ಎಸೆಯುವಂತಹದು. ತೀರಾ ಅವಸರದಲ್ಲಿ ಹೀಗೆ ಬಂದು ಹಾಗೆ ಹೋದಂತಾಗಿ ಅಭಿನಯಪಟುತ್ವ-ಸ್ಫುಟತ್ವವಿರುವ ಅತ್ಯುತ್ತಮ ಕಲಾವಿದೆಯರಿದ್ದೂ ಪರಿಣಾಮರಮಣೀಯವಾಗುವ ಅವಕಾಶವನ್ನು ಗೇಣಳತೆಯಲ್ಲಿ ತಪ್ಪಿಸಿಕೊಂಡಂತೆನಿಸಿತು. ಮುಗ್ಧಾನಾಯಿಕೆಯ 'ಬೆಳದಿಂಗಳು' ಕೊಂಚ ಮೋಡದ ತೆಳುಪರದೆಯಲ್ಲಿ ಮುಸುಕಿಟ್ಟಂತಾದುದು ಅಭಿನಯಕ್ಕೆ ಬೇಕಾದ ಅನುಭವದ್ರವ್ಯ ಬಗೆಯ ಬೋಗುಣಿಯಿಂದ ಕೆನೆಗಟ್ಟಿ ಉಕ್ಕದಿರುವುದರಿಂದಲೇ ಇದ್ದೀತು. ಹಾಸಸ್ಫುರಕವಾದ ವಿಫಲಾಂಕರಣ ಪ್ರಕರಣದ ನಾಯಿಕೆಯ ಅಂಗಾಂಗಶೃಂಗಾರದ ಸನ್ನಾಹ, ಹೇರಳ ವಿನೋದವಸ್ತುನಿರ್ಭರವಾಗಿದ್ದರೂ ಹೊರಸೂಸಿದ್ದು ಕೆಲವೇ ಘಟ್ಟಗಳು.

ಅಂದು ಎಲ್ಲ ಕಲಾವಿದೆಯರ ಪ್ರಸ್ತುತಿ ಪರಿಶ್ರಮವನ್ನು ಮಬ್ಬಾಗಿಸುವಲ್ಲಿ 'ಬೆಳಕಿನ' ಗೊಂದಲದ ನಿರ್ವಹಣೆಯದೇ ಸಿಂಹಪಾಲು. ಯಾವ ತರ್ಕ-ತೋರ್ಗಣೆಯೂ ಇಲ್ಲದೆ ಎಲ್ಲೆಲ್ಲೋ ಚೆಲ್ಲುವ ಬೆಳಕು. ಇದ್ದಕ್ಕಿದ್ದಂತೆ ಪ್ರಖರತೆ ಕಳೆದು ಗಾಳಿಸೊಡರಾಗುವ ದೀಪ ರಂಗದ ಕಲಾವಿದರನ್ನು ಅಟ್ಟಾಡಿಸಿತು. ದೀಪನ್ಯಾಯದೊಂದಿಗೆ ಸಮದಂಡಿಯಾಗಿ ಹಾಲಿಗೆ ಹೆಪ್ಪಿಟ್ಟದ್ದು ಹಿಮ್ಮೇಳದ ಕೈವಾರಿಕೆ. ಅದೇನು ಸೋದ್ದೇಶವೋ, ಅನುದ್ದೇಶವೋ, ನಿರುದ್ದೇಶವೋ ಬಹುತೇಕ ರಂಗಪಾಠ್ಯವಾದ ಸಾಹಿತ್ಯದ ಯಾವ ಶಬ್ದವೂ ಪ್ರೇಕ್ಷಕರಿಗೆ ಸ್ಫುಟವಾಗಿ ಕೇಳಿದ್ದಿಲ್ಲ. ಹೆಚ್ಚಿನ ಹಾಡುವಿಕೆ(ಮಂದ್ರದಲ್ಲಾಗಲೀ ತಾರದಲ್ಲಾಗಲೀ) ಹುಸಿಶರೀರದಲ್ಲೇ ತೆವಳುತ್ತಿತ್ತು. ಕನ್ನಡ ಸಬ್ದದ ಉಚ್ಚಾರದ ಬಗ್ಗೆ ನಿಗಾ ಇರದುದರಿಂದ ಹಾಡುಗಾರನ 'ಬಯಕೆ' ಎಲ್ಲಾ 'ಭಯಕೆ' ಆಗುತ್ತಿದ್ದುದೂ ವಿಡಂಬನೆ. ಇನ್ನು ಭಾವಸಾಂದ್ರತೆಯನ್ನು ಗಾನದಲ್ಲಿ ನಿರೀಕ್ಷಿಸುವುದೆಲ್ಲಿ? ಒಂದುಕ್ಷಣವೂ ವಿರಾಮವಿಲ್ಲದ ಗಾಯನದಿಂದ ವಾದ್ಯಗಳ ನುಡಿಸಾಣಿಕೆಗೆ ಸಂದೇ ಇಲ್ಲದೆ ಎಫೆಕ್ಟ್ ಬರಬೇಕಾದಲ್ಲೆಲ್ಲಾ ಖಾಲಿತನ ಕಂಡುಬಂದದ್ದು ಪ್ರದರ್ಶನದ 'ಅವ್ಯವಧಾನತೆ'ಗೊಂದು ಕಾರಣವೂ ಹೌದು.

ಕಲಾವಿದರ ಅಂತರಂಗದಿಂದ ನಾಟ್ಯರಂಗಕ್ಕೆ ಜಿಗಿದು ಸಹೃದಯನ ರಸಾಂಗಣವನ್ನು ಹೊಗುವ ಭಾವದ್ರವ್ಯವನ್ನು ಕಡೆದಲ್ಲದೇ ಫಲದ ನವನೀತ ಸುಲಭಲಭ್ಯವಾಗದು. ಭರತನೃತ್ಯಶಾಲೆಯ ಕಲಾವಿದೆಯರಲ್ಲಿ (ಹರಿಣಿ, ನಮಿತ, ನಯನ, ದೀಕ್ಷಾ) ನೃತ್ತ, ನೃತ್ಯ, ನಾಟ್ಯ, ಅಭಿನಯಾದಿಗಳ ಗಟ್ಟಿ ಪಂಚಾಂಗವಿದೆ, ಕಠಿನ ಅಭ್ಯಾಸವಿದೆ, ನಿತಾಂತಶ್ರದ್ಧೆಯಿದೆ; ಹತ್ತರಲ್ಲಿ ಇನ್ನೊಂದಾಗದ ಪ್ರತ್ಯೇಕ ನಾಟ್ಯಮಾನ್ಯತೆ ಇದೆ. ಖಂಡಿತವಾಗಿಯೂ ಸಹೃದಯಲೋಕ ಇವರಿಂದ ಉತ್ತುಂಗಪ್ರದರ್ಶನವನ್ನು ನಿರೀಕ್ಷಿಸುವ ಊರ್ಜೆ ಇದೆ. ಅದು ಪೂರ್ಣರೂಪದಿಂದ ಪ್ರಕಾಶಿಸಲಿ ಎಂಬುದೇ ಹಾರೈಕೆ.

**(ಲೇಖಕರು : ಹೆಸರಾಂತ ವಿಮರ್ಶಕರು, ಕವಿ, ಅವಧಾನ ಪೃಚ್ಛಕರು)**

ನರ್ತನ ಸುರಭಿ

# 'ಬಲೆ' ಬೀಸುವ ಕಲೆಯ ನೆಲೆ–ಬೆಲೆ

– ನಿವೇದಿತಾ ಶ್ರೀನಿವಾಸ್, ಬೆಂಗಳೂರು.

ನಮ್ಮ ನೃತ್ಯಶಾಲೆಯ ಈ ಬಾರಿಯ ವಾರ್ಷಿಕೋತ್ಸವಕ್ಕೆ 'ಗಿಲಿಗಿಲಿ ಮ್ಯಾಜಿಕ್' ತಂಡವನ್ನು ಕರೆಸಿದ್ದೆವು. ಮಕ್ಕಳಲ್ಲದೆ ವಯೋವೃದ್ಧರೂ ಸಹ ಅವರ ಪ್ರದರ್ಶನ ಮೆಚ್ಚಿದರು. ತಂಡದ ಮುಖ್ಯಸ್ಥರಾದ ಶಂಕರ್ ಮತ್ತು ಜೂನಿಯರ್ ಶಂಕರ್ ಅಥವಾ ತೇಜಸ್ವಿ ಅವರು ಪ್ರದರ್ಶನದ ನಂತರ ತಮ್ಮ ಅನುಭವ ಹಂಚಿಕೊಳ್ಳುತ್ತಿದ್ದರು. ಅವರು, 'ಕೆಲವು ಪ್ರತಿಷ್ಠಿತ ರಂಗಮಂದಿರಗಳಲ್ಲಿ ಇಂದ್ರಜಾಲಕ್ಕೆ ಅವಕಾಶವೇ ಕೊಡುವುದಿಲ್ಲ, ಏಕೆಂದರೆ ಅವರ ಪ್ರಕಾರ ಇದು ಒಂದು ಕಲೆಯೇ ಅಲ್ಲ' ಎಂದು ಬೇಸರಿಸಿದರು. ಹಾಗಾದರೆ, ಯಾವುದನ್ನು ಕಲೆ ಎನ್ನೋಣ? ಕಲೆ ಎನಿಸಿಕೊಳ್ಳಲು ಅದಕ್ಕಿರಬೇಕಾದ ಅರ್ಹತೆ, ಮಾನದಂಡಗಳೇನು? ಅವು ಇಂದ್ರಜಾಲದಲ್ಲಿ ಇಲ್ಲವೇ?

ಕಲೆಯನ್ನು ಅನೇಕರು ಅನೇಕ ರೀತಿ ವ್ಯಾಖ್ಯಾನಿಸಿದ್ದಾರೆ. ಕೆಲವರಿಗೆ ಇದು ಆಸ್ವಾದನೆ ನೀಡುವ ವಸ್ತುವಾದರೆ, ಮತ್ತೆ ಕೆಲವರಿಗೆ ಪ್ರಕೃತಿಯ ಪ್ರತಿಕೃತಿ. ಹಲವರಿಗೆ ಮನೋರಂಜನೆಯ ಸಾಧನವಾದರೆ, ಇನ್ನು ಹಲವರಿಗೆ ಜೀವನವೇ ಒಂದು ಕಲೆ! ಒಟ್ಟಾರೆ ಹೇಳುವುದಾದರೆ, ಒಬ್ಬ ಕಲಾವಿದನ ಪ್ರತಿಭೆಯು ಸ್ಫೂರ್ತಿಗೊಳಪಟ್ಟಾಗ ಒಂದು ಮಾಧ್ಯಮದ ಮೂಲಕ ಹೊರಹೊಮ್ಮಿ ಒಂದು ರೂಪ ಪಡೆದುಕೊಳ್ಳುವುದನ್ನು ಕಲೆ ಎನ್ನಬಹುದು. ಸಹೃದಯನು ಅದನ್ನು ಆಸ್ವಾದಿಸುತ್ತಾನೆ. ಇಲ್ಲಿ, ಕಲಾವಿದ ತನಗಾದ ಆಸ್ವಾದನೆಯನ್ನು ಒಂದು ಮಾಧ್ಯಮದ ಮೂಲಕ ಸಹೃದಯನಿಗೆ ವರ್ಗಾಯಿಸುತ್ತಾನೆ. ಸಹೃದಯನ ಕಡೆಯಿಂದ ಅವಲೋಕಿಸಿದಾಗ, ಅವನಿಗೆ ಆ ವಸ್ತುವು ಉಳಿದವಕ್ಕಿಂತ ಭಿನ್ನವಾಗಿದೆ, ವಿಶೇಷವಾಗಿದೆ ಎನಿಸುತ್ತದೆ. ಆ ವಿಶೇಷತೆಯು ಬಾಹ್ಯ ಇಂದ್ರಿಯಗಳಿಗೆ ಮೊದಲು ಮೆಚ್ಚುಗೆಯಾಗುತ್ತದೆ. ಒಳಹಾದು ಮನಸ್ಸಿಗೆ ಮುಟ್ಟುವುದು ಅದರ ಆಳ, ತೀವ್ರತೆಯನ್ನವಲಂಬಿಸಿರುತ್ತದೆ. ಕೆಲವು ನಮ್ಮ ಮನಃಪಟಲದಲ್ಲಿ ಕೆಲಕಾಲ ಮಾತ್ರ ನಿಂತರೆ; ಮತ್ತೆ ಕೆಲವು ದೀರ್ಘಕಾಲ ಅಚ್ಚಳಿಯದೇ ಉಳಿಯುತ್ತವೆ. ಹಿಡಿದಿಟ್ಟುಕೊಳ್ಳುವ ಗುಣ ಯಾವುದರಲ್ಲಿದೆಯದೆಯೋ, ಯಾವುದರಿಂದ ನಮ್ಮನ್ನು ನಾವು ಮರೆಯುತ್ತೇವೋ, ಎಲ್ಲಿ ಕಲಾವಿದ, ಸಹೃದಯ ಒಂದೇ ಆಗಿರುತ್ತಾರೋ, ಅಂತಹ ಸೃಷ್ಟಿಯು ಉನ್ನತ ಮಟ್ಟದ ಕಲೆಯೆನಿಸಿಕೊಳ್ಳುತ್ತದೆ.

ಪ್ರಸ್ತುತ ಪ್ರಶ್ನೆಯ ವಿಷಯುವಾಗಿರುವ ಇಂದ್ರಜಾಲದ ಹಿನ್ನೆಲೆಯನ್ನೊಮ್ಮೆ ಪರೀಕ್ಷಿಸಿ ಮುಂದುವರೆಯೋಣ. ನಮ್ಮ ಸಂಸ್ಕೃತಿಯಲ್ಲಿ ಮಾಯೆ, ಮಾಟ–ಮಂತ್ರ, ಮೋಡಿ, ವಶೀಕರಣ ಇತ್ಯಾದಿಗಳು ಹೊಸದೇನಲ್ಲ. ರಾಮಾಯಣ–ಮಹಾಭಾರತಗಳಲ್ಲಿ, ಪುರಾಣಗಳಲ್ಲಿ, ನೀತಿಕಥೆಗಳಲ್ಲಿ ಇದರ ಉಲ್ಲೇಖ ಹೇರಳವಾಗಿ ಕಾಣಬಹುದು. ದೇವತೆಗಳ ಮುಖಂಡನಾದ ಇಂದ್ರನು ತನ್ನ ಮಾಯಾಶಕ್ತಿಗೆ ಖ್ಯಾತಿ ಪಡೆದವನು. ಆ ಶಕ್ತಿಯ ಪ್ರಯೋಗದಿಂದ ಜಾಲ ಅಥವಾ ಬಲೆ ಬೀಸಿ ಹಿಡಿಯುವುದು ಎಂಬರ್ಥದಲ್ಲಿ ಇಂದ್ರಜಾಲವೆಂಬ ಹೆಸರು ಪ್ರತೀತಿಗೆ ಬಂದಿದೆ. ಉಪದೇವತೆಗಳಾದ ಯಕ್ಷರೂ ಇದನ್ನು ಬಳಸುತ್ತಿದ್ದರಿಂದ ಯಕ್ಷಿಣಿವಿದ್ಯೆ ಎಂದೂ ಕರೆಯುವುದುಂಟು. ಸೋಮೇಶ್ವರನ ಮಾನಸೋಲ್ಲಾಸ, ವಾತ್ಸ್ಯಾಯನನ ಕಾಮಸೂತ್ರದಂಥ ಕೆಲವು ಗ್ರಂಥಗಳಲ್ಲಿ ಈ ವಿದ್ಯೆಯ ಬಗ್ಗೆ ವಿವರಣೆಯಿದೆ. ಅಲ್ಲಿಂದ ಪ್ರದರ್ಶನ ಮಟ್ಟಕ್ಕೆ ಆಗುವಾಗಿನ ಬೆಳವಣಿಗೆಗೆ ಸಿಗುವ ಆಧಾರಗಳು ಪ್ರವಾಸಿಗಳು ತಮ್ಮ ಪ್ರವಾಸಕಥನಗಳಲ್ಲಿ ಪ್ರಸ್ತಾಪಿಸಿರುವ, ರಾಜರ ಆಸ್ಥಾನಗಳಲ್ಲಿ ಕಂಡ ಪ್ರದರ್ಶನಗಳ ವಿವರ. ಇಷ್ಟನ್ನು ಹೊರತುಪಡಿಸಿದರೆ, ಬೇರೆ ಪುರಾವೆ ಸಿಗದಿರುವುದಕ್ಕೆ ಕಾರಣ ದಾಖಲೀಕರಣವಾಗದಿರುವುದು. ಆದರೆ ಇಂದು ನಾವು ರಂಗಮಂದಿರಗಳಲ್ಲಿ ಕಾಣುವ ಇಂದ್ರಜಾಲದ ಚಟುವಟಿಕೆಗಳು, ಹಿಂದೆ ಬೀದಿಗಳಲ್ಲಿ ಪ್ರದರ್ಶಿತವಾಗುತ್ತಿದ್ದುದರ ಪರಿಷ್ಕೃತ ರೂಪವೆಂಬುದಂತೂ ನಿಜ. ಗೋಗಿಯ ಪಾಷ, ಪಿ.ಸಿ.ಸರ್ಕಾರ್, ಕೆ.ಲಾಲ್ ಮುಂತಾದವರು ಇದರ ಜನಪ್ರಿಯತೆಗೆ ಕಾರಣರಾದವರು ಎಂಬುದು ತಿಳಿದುಬರುವ ವಿಷಯ.



ಇನ್ನು, ಇಂದಿನ ಇಂದ್ರಜಾಲ ಪ್ರದರ್ಶನದಲ್ಲಿ ಏನಾಗುತ್ತದೆ ನೋಡೋಣ. ಇದರಲ್ಲಿ ಪ್ರೇಕ್ಷಕನು ಆಶ್ಚರ್ಯಚಕಿತನಾಗುತ್ತಾನೆ, ನಿಬ್ಬೆರಗಾಗುತ್ತಾನೆ, ಮೂಕವಿಸ್ಮಿತನಾಗುತ್ತಾನೆ, ಹಲವೊಮ್ಮೆ ಭಯಭೀತನಾಗುವುದೂ ಉಂಟು, ಕಡೆಯಲ್ಲಿ ಉಲ್ಲಸಿತನಾಗುವುದೂ ನಿಜ. ಹೊಸತೇನನ್ನೋ ಕಾಣುವ ನಿರೀಕ್ಷೆ, ಕುತೂಹಲ ಅವನಲ್ಲಿ ಇದ್ದೇ ಇರುತ್ತದೆ. ಇವಿಷ್ಟು ಪ್ರೇಕ್ಷಕನ ಪ್ರತಿಕ್ರಿಯೆಯಾದರೆ, ಕ್ರಿಯಾಶೀಲನಾದ ಯಕ್ಷಿಣಿಗಾರನೂ ಏನನ್ನಾದರೂ ಅನುಭವಿಸುತ್ತಿರಬೇಕಲ್ಲವೇ? ಇತರ ಮಾಧ್ಯಮಗಳಂತೆ ಇವನೂ ಸತತ ಅಭ್ಯಾಸ ಮಾಡುತ್ತಿರಬೇಕಲ್ಲವೇ? ಒಂದಷ್ಟು ಪ್ರತಿಭೆಯೂ ಇರಬೇಕಲ್ಲವೇ? ಹೊಸತೇನಾದರೂ ಸೃಷ್ಟಿಸುವ ಪ್ರಯತ್ನ ನಡೆದೇ ಇರುತ್ತದಲ್ಲವೇ? ಉತ್ತರಕ್ಕಾಗಿ ತೇಜಸ್ವಿ ಅವರನ್ನೇ ಕೇಳಿದರೆ – ನಾಲ್ಕು ವರ್ಷದವರಿದ್ದಾಗಲೇ 'ವಿಶ್ವದ ಅತಿಕಿರಿಯ ಮೆಜಿಷಿಯನ್' ಎಂಬ ಪ್ರಶಸ್ತಿಗೆ ಭಾಜನರಾಗಿದ್ದ, ಗಿನ್ನೆಸ್ ದಾಖಲೆಗೂ ನೇಮಕಗೊಂಡ, ನಮ್ಮ ದೇಶವಲ್ಲದೆ ಹೊರದೇಶಗಳಲ್ಲೂ ಹೆಸರು ಮಾಡಿರುವ ಇವರ ಸಾಧನೆ, ಪರಿಶ್ರಮ, ಅನುಭವ ಅಪಾರ. ಪತ್ರ ಮುಖೇನ ಕಳಿಸಿದ ಪ್ರಶ್ನಾವಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ನೀಡುವ ಮೂಲಕ ರಹಸ್ಯಮಯ ಪ್ರಪಂಚದ ಬಾಗಿಲನ್ನೇ ತೆರೆದಿಟ್ಟಿದ್ದಾರೆ.

'ಇಂದ್ರಜಾಲದ ಪ್ರತಿಯೊಂದು ಕ್ರಿಯೆಯೂ ವೈಜ್ಞಾನಿಕ ಸಂಶೋಧನೆಯ ಫಲವೇ ಹೊರತು ಮತ್ತೇನಲ್ಲ. ಯಕ್ಷಿಣಿಗಾರನು ಜನರನ್ನು ಮೋಡಿ ಮಾಡಲು ಕಲೆಯ ಸಹಾಯ ಪಡೆಯುತ್ತಾನಷ್ಟೆ. ಸಂಗೀತ, ಭಾವಾಭಿನಯ, ಮೋಡಿಗೊಳಿಸುವ ಮಾತು, ನೃತ್ಯ ಸಂಯೋಜನೆ ಇತ್ಯಾದಿಗಳು ಅವನ ಕ್ರಿಯೆಗೆ ನೆರವಾಗುತ್ತವೆ. ಹಾಗಾಗಿ, ಇಂದ್ರಜಾಲವು ವಿಜ್ಞಾನದ ಕಲಾತ್ಮಕ ಅಭಿವ್ಯಕ್ತಿ ಎಂಬುದು ಸ್ಪಷ್ಟ. ಹಾಗಲ್ಲದೆ, ಸಂಶೋಧನೆಯನ್ನು ಯಥಾವತ್ತಾಗಿ ಪ್ರದರ್ಶಿಸಿದರೆ ರಂಜನೆಯಾಗುವುದೇ? ಇನ್ನುಳಿದಂತೆ, ಯಕ್ಷಿಣಿಗಾರನೂ ಸಹ ಒಳ್ಳೆಯ ಪ್ರದರ್ಶಕನಾಗಿರುವುದು ಅತಿಮುಖ್ಯ. ಒಂದು ಸಣ್ಣ ಚೇಷ್ಟೆಯನ್ನೂ ಪರಿಣಾಮಕಾರಿಯಾಗಿ ಸಾದರಪಡಿಸುವ ಕುಶಲತೆ ಹೊಂದಿರಬೇಕು. ಇತರ ಕಲೆಗಳ ಜ್ಞಾನದ ಜೊತೆಗೆ ಅವನು ರಸಾಯನ ಶಾಸ್ತ್ರ, ಯಂತ್ರಶಾಸ್ತ್ರಗಳಂಥ ವಿದ್ಯೆಗಳ ಅಂಶಗಳನ್ನೂ ತಿಳಿದಿದ್ದರೆ ಉತ್ತಮ.

ಇನ್ನು ರಸದ ವಿಷಯಕ್ಕೆ ಬಂದಾಗ, ಇಂದ್ರಜಾಲವು ಅದ್ಭುತ ಮತ್ತು ಹಾಸ್ಯರಸಗಳ ಅನುಭವ ನೀಡುತ್ತದೆ. ಯಕ್ಷಿಣಿಗಾರನ ಉದ್ದೇಶವೂ ಸಹ ಹಾಗೆ ರಂಜಿಸುವುದೇ ಆಗಿರುತ್ತದೆ. ಆದರೆ, ಕೆಲವು ಕ್ರಿಯೆಗಳಿಂದ ಭಯಾನಕವೂ, ದೇಹ ತುಂಡರಿಸುವಂಥ ಪ್ರದರ್ಶನದಿಂದ ಭೀಭತ್ಸದಂಥ ರಸಗಳೂ ಉದ್ಭವಿಸುವಂತೆ ಮಾಡಲಾಗುತ್ತದೆ. ಅಲ್ಲದೆ, ವಿಷಯಾಧಾರಿತ ರಂಗಪ್ರಸ್ತುತಿಗಳಲ್ಲಿ ವೀರ, ಕರುಣ, ಶಾಂತದಂಥ ರಸಗಳನ್ನೂ ಕಾಣಬಹುದು. ಆದರೆ ಇದಕ್ಕೆ ಪ್ರೇಕ್ಷಕನು ತನ್ನ 'ಅಹಂ' ಅನ್ನು ಸಮರ್ಪಿಸಲೇಬೇಕು. ಹಲವರಿಗೆ ತಾವು ಇಂದ್ರಜಾಲದ ಕ್ರಿಯೆಯಿಂದ ಮೂರ್ಖರಾದೆವೆಂದು ಹೇಳಿಕೊಳ್ಳಲು ನಾಚಿಕೆ. ಆದರೆ ನಿಜಾರ್ಥದಲ್ಲಿ ಆ ಅನುಭವ ಪಡೆದವನ ಬುದ್ಧಿಯೇ ಆರೋಗ್ಯದಿಂದಿರುವುದು! ಅಲ್ಲದೆ, ಯಕ್ಷಿಣಿಗಾರನೂ ತಾನೂ ಆಸ್ವಾದಿಸುತ್ತಾ ತನ್ಮಯತೆಯಿಂದ ಕಾರ್ಯದಲ್ಲಿ ತೊಡಗಿದ್ದಾಗ ಮಾತ್ರ, ಪ್ರೇಕ್ಷಕನೂ ಅದರಲ್ಲಿ ಮುಳುಗಲು ಸಾಧ್ಯ. ಇಲ್ಲದಿದ್ದರೆ ಅದು ಕೇವಲ ಒಂದು ಯಾಂತ್ರಿಕ ಕ್ರಿಯೆಯಾಗುತ್ತದೆ.'

ಪ್ರೇಕ್ಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳುವಂತೆ ಕೇಳಿದಾಗ ಹೊರಬಂದ ಉದ್ಗಾರಗಳು ಇವು. 'ಯಾವುದೋ ಲೋಕಕ್ಕೆ ಹೋದಂತಾಯಿತು!', 'ಆತ ಮಾಡಿದ್ದೆಲ್ಲಾ ಭ್ರಮೆ, ಸತ್ಯವಲ್ಲ ಎಂದು ಗೊತ್ತಿದ್ದರೂ ಏನೋ ಪುಳಕ ಉಂಟಾಗುತ್ತಿತ್ತು!', 'ಅವರ ತಮಾಷೆಯ ನಡೆ–ನುಡಿಗೆ ನಕ್ಕೂ ನಕ್ಕೂ ಸಾಕಾಯಿತು', 'ಅರೆ! ಹೇಗೆ ಮಾಡಿದರಪ್ಪಾ ಎಂದು ಪ್ರತಿ ಸಲ ಆಶ್ಚರ್ಯವಾಗುತ್ತಿತ್ತು', 'ಆತನನ್ನು ನೋಡುವುದೇ ಆನಂದ. ಎಂಥ ಆಕರ್ಷಕ ವ್ಯಕ್ತಿತ್ವ ಅವನದ್ದು!'. ಈ ಪ್ರತಿಕ್ರಿಯೆಗಳ ಜೊತೆಗೆ ತೇಜಸ್ವಿಯವರ ನಿರೂಪಣೆ ಮತ್ತು ಅದರ ಮುಂಚಿನ ಸಾಲುಗಳಲ್ಲಿ ಮಾಡಿರುವ ಕಲೆಯ ಅವಲೋಕನ, ಇವೆರಡರಲ್ಲೂ ಹೊಂದಾಣಿಕೆ ಕಾಣುತ್ತಿದ್ದರೂ, ಇನ್ನಷ್ಟು ಪೂರಕ ಅಂಶಗಳನ್ನು ಒದಗಿಸುವ ಪ್ರಯತ್ನ ಮುಂದೆ ಮಾಡಲಾಗಿದೆ.

ಸಂಗೀತ, ಕಾವ್ಯಾದಿಗಳಲ್ಲಿ ಕಾಣುವ ಆದಿ–ಬೆಳವಣಿಗೆ–ಉತ್ತುಂಗ–ಅಂತ್ಯ ಈ ಅಂಶಗಳನ್ನು ಇಂದ್ರಜಾಲದಲ್ಲಿಯೂ ಕಾಣಬಹುದು. ಇವು ಯಕ್ಷಿಣಿಗಾರನ ಒಂದೊಂದು ಸಣ್ಣ ಕ್ರಿಯೆಯಲ್ಲೂ ಇರುತ್ತವೆ. ಆದ್ದರಿಂದಲೇ ಪ್ರೇಕ್ಷಕನಿಗಾಗುವ ಅನುಭವವೂ ಸಹ ಕ್ಷಣಿಕವಾದದ್ದು, ತಾತ್ಕಾಲಿಕ ಆನಂದ ಕೊಡುವಂಥದ್ದು. ಅಂದರೆ ಪೋಷಣಶಕ್ತಿ ಕಡಿಮೆಯುಳ್ಳದ್ದು. ಆದಾಗ್ಯೂ ರಸದ ಕ್ಷಣಗಳನ್ನಂತೂ ಒದಗಿಸುತ್ತದಲ್ಲ. ಇನ್ನು ಪ್ರೇಕ್ಷಕನು ಸಹೃದಯನಾಗಿರಬೇಕೇ ಎಂದು ಪ್ರಶ್ನಿಸಿದರೆ, ಯಾವುದನ್ನೇ ಆಗಲಿ, ಅನುಭವಿಸಿ ಆನಂದಿಸಲು ಅದಕ್ಕೆ ಬೇಕಾದ ಕಣ್ಣು, ಕಿವಿ ಮತ್ತು ಮನಸ್ಸು ಇರಲೇಬೇಕಲ್ಲವೆ?

ಇಷ್ಟಲ್ಲದೆ, ಪ್ರೊ. ಶಂಕರ್ ಅವರು ಈ ಮಾಧ್ಯಮದ ಮೂಲಕವೇ ಮಕ್ಕಳಿಗೆ ನೀತಿತತ್ತ್ವಗಳ ಬೋಧನೆ, ಗ್ರಾಮವಾಸಿಗಳಿಗೆ ಬ್ಯಾಂಕಿನ ಯೋಜನೆಗಳ ಅರಿವು, ದುಶ್ಚಟ ನಿವಾರಣೆಗಳಂಥ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಇದರಿಂದ ಈ ವಿದ್ಯೆಯ ವ್ಯಾಪ್ತಿಯನ್ನರಿಯಬಹುದು. ನಾಟ್ಯವೇದದ ಸೃಷ್ಟಿಯ ಸಮಯದಲ್ಲಿ ಬ್ರಹ್ಮನು ಅದರ ಗುರಿಯ ಕುರಿತು ಹೇಳಿದ ಲೋಕೋಪದೇಶದ ಮಾತನ್ನು ಇಲ್ಲಿ ಸ್ಮರಿಸಬಹುದು. ಇವಿಷ್ಟೂ ವಿಶ್ಲೇಷಣೆಯ ನಂತರ, ಇನ್ನಾದರೂ 'ಇಂದ್ರಜಾಲವೂ ಒಂದು ಕಲಾಪ್ರಕಾರ' ಎಂದು ಒಪ್ಪಬಹುದಲ್ಲವೇ?

ಅಂತ್ಯವಾಕ್ಯ: ಪ್ರೊ.ಸಾ.ಕೃ.ರಾಮಚಂದ್ರರಾವ್ ಅವರ 'ಭರತಮುನಿಯ ನಾಟ್ಯಶಾಸ್ತ್ರ' ಕೃತಿಯಲ್ಲಿ ಕಾವ್ಯ, ನಾಟಕಗಳ ಸಾಮರ್ಥ್ಯವನ್ನು ವಿಶ್ಲೇಷಿಸುತ್ತಾ ಹೀಗೆನ್ನುತ್ತಾರೆ. 'ಅನುಭವಕ್ಕೆ ಬರದ ರಸವೇ ಅಲ್ಲ. ರಸ ಇರುವುದು ಅನುಭವದಲ್ಲೇ'. ಅಂದ ಮೇಲೆ ರಸದ ಅನುಭವ ಕೊಡುವಂಥದ್ದು ಕಲೆಯೆನಿಸಿಕೊಳ್ಳದೇ?




ಭ್ರಮರಿಯ ಸಂಚಿಕೆ 3ರಲ್ಲಿ ಬೆಂಗಳೂರಿನ ಪ್ರೊ.ಎಸ್. ರತ್ನಮ್ಮನವರು ರಂಗಭ್ರಮರಿ ಅಂಕಣದಲ್ಲಿ ವಿಶದಪಡಿಸಿದ ಪೌರಾಣಿಕ ಸಾಕ್ಷ್ಯಾಧಾರಗಳ ವಿನೂತನ ರೀತಿಯ ನಿರೂಪಣೆ ನೃತ್ಯಕಲೆಯಲ್ಲಿ ಹಸ್ತಮುದ್ರೆಗಳ ಬಗೆಗಿನ ಆಳವಾದ ಪರಿಜ್ಞಾನವನ್ನು ಮನವರಿಕೆ ಮಾಡಿತ್ತು. ಭಾರತಯುದ್ಧರಂಗದಲ್ಲಿ ಭಗವಾನ್ ಶ್ರೀಕೃಷ್ಣನ ಮುದ್ರಾಪ್ರವೀಣತ್ವವನ್ನು ಇಂದಿನ ರಿಮೋಟ್‌ನ ಹಾಗೆ ಬಳಸಿದ ವಿಧಾನ ಹಾಗೂ ದುರ್ಗಾದೇವಿಗೆ ಕರಣಗಳನ್ನು ಹೊಂದಿಸಿದ ಕೌಶಲ್ಯತೆಯ ಉದಾಹರಣೆಗಳನ್ನು ಮೆದುಕಡಲೆಯ ಜಗಿತದಂತೆ ಜನಸಾಮಾನ್ಯರಿಗೆ ಮುಟ್ಟಿಸಿದ್ದಾರೆ. ನೃತ್ಯಮುದ್ರೆಯ ಈ ವಿವರಣೆ ಜನಸಾಮಾನ್ಯರಿಗೂ ಆಸಕ್ತಿಯಿಂದ ಓದಿಸಿಕೊಂಡು ಹೋಗುವಂತೆ ಮಾಡುತ್ತದೆ. ಹಾಗೆಯೇ ಕಲಾಕೌಶಲ್ಯತೆಗೆ ಯಾವುದೇ ಜಾತಿ ಮತಧರ್ಮಗಳ ಬಳಿಯದೆ ಕಲಾದೇವಿ ಸರ್ವಧರ್ಮೀಯರನ್ನೂ ಸ್ವೀಕರಿಸಿ ಪರಸ್ಪರ ಸಹೋದರತ್ವ ಬೆಳೆಸಿಕೊಳ್ಳುವ ಅಪೂರ್ವ ತತ್ತ್ವದ ಪ್ರತಿಪಾದನೆಗೂ ಲೇಖನ ವೇದಿಕೆಯಾಗಿ ಮನಸೂರೆಗೊಳಿಸುತ್ತದೆ. ಈ ರೀತಿಯ ಸುಲಭ ಶೈಲಿಯ ಕಿರುಲೇಖನಗಳನ್ನು ಬಳಸಿಕೊಳ್ಳುವುದರಿಂದ ಇಂದಿನ ದೃಷ್ಟಿಕೋನಕ್ಕೆ ಹೊಂದಿಕೊಳ್ಳಲು ಸಾಧ್ಯ. ವಂದನೆಗಳು.

**– ಕೀರಿಕ್ಕಾಡು ವನಮಾಲಾ ಕೇಶವ ಭಟ್ಟ, ಕಾಸರಗೋಡು**

ತಾವು ವಿದ್ಯಾಮಾನ್ಯರು. ಕಲೆಯನ್ನೇ ಪುಷ್ಟೀಕರಿಸಿ, ಮುದ್ರೆಗಳ ಹಾವಭಾವದೊಂದಿಗೆ ಮುಖ್ಯತಃ ಭರತನಾಟ್ಯವನ್ನೇ ಮೇಳೈಸಿದ 'ನೂಪುರ ಭ್ರಮರಿ' ಪುಟ್ಟದಾದರೂ ಅರ್ಥಗರ್ಭಿತವಾಗಿ ಅರ್ಪಿಸಿದ್ದೀರಿ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಪುಣ್ಯಕೋಟಿ'ಯ ಪುಣ್ಯಚರಿತ್ರೆ ಚಿಕ್ಕಂದಿನ ನೆನಪುಗಳನ್ನು ಮೆಲುಕು ಹಾಕಿಸಿ ಮುಂದಡಿಯಿಟ್ಟಿದೆ. ಅಂದಹಾಗೆ ನಮ್ಮ ಮನೆಗೆ ಯಾರಾದರೂ ಅತಿಥಿ–ಅಭ್ಯಾಗತರು ಬಂದವರು 'ನೂಪುರ ಭ್ರಮರಿ'ಯನ್ನು ಮತ್ತೊಮ್ಮೆ, ಇನ್ನೊಮ್ಮೆ ಮಗದೊಮ್ಮೆ ಓದಲಾಶಿಸುತ್ತಾರೆ ಎಂಬುದೇ ಈ ಪತ್ರಿಕೆಯ ಗರಿಮೆಗೆ ಸಾಕ್ಷಿ.

**– ಮಾಸ್ಟರ್ ವಿಠಲ್, ಹಿರಿಯ ನಾಟ್ಯಗುರು, ಮಂಗಳೂರು.**

## ನೂಪುರ ಭ್ರಮರಿ ನೃತ್ಯ ಸಂಶೋಧಕರ ಒಕ್ಕೂಟ

# ವಿಕಸನ ಗೋಷ್ಠಿ



ನೃತ್ಯ ಕಲಿಯುವಾಗಿನ ದಿಸೆಯಿಂದ ಹಿಡಿದು ಈವರೆಗೂ ನೃತ್ಯವೆಂದರೆ ಏನು? ಹೇಗೆ? ಯಾಕೆ? ಎಂಬುದು ಆಗಾಗ ಪರಾಮರ್ಶನ ಮಾಡಿಕೊಳ್ಳುತ್ತಲೇ ಬಂದಿರುವ ಸಂಗತಿ. ಜೊತೆಜೊತೆಗೇ ನೃತ್ತ–ನೃತ್ಯ–ನಾಟ್ಯ, ಮಾರ್ಗ–ದೇಸೀ, ಲೋಕಧರ್ಮಿ– ನಾಟ್ಯಧರ್ಮಿ, ಉದ್ಧತ–ಸುಕುಮಾರ, ಲಾಸ್ಯ–ತಾಂಡವ, ಅಭಿನಯ, ಭಾವ–ವಿಭಾವ–ಅನುಭಾವ, ರಸ–ಔಚಿತ್ಯ–ವ್ಯುತ್ಪತ್ತಿ, ಶಾಸ್ತ್ರ–ಸಂಪ್ರದಾಯ–ಪರಂಪರೆ– ರಂಗನಿರ್ಮಾಣ...,ಇತ್ಯಾದಿ ಪಾರಿಭಾಷಿಕ ಶಬ್ದಗಳಿಂದ ಮೊದಲ್ಗೊಂಡು ಸಂಶೋಧನೆಯ ಹಲವು ಆಯಾಮ ಅಂದರೆ ಒಳ್ಳೆಯ ಸಂಶೋಧನೆಯೆಂದರೆ ಏನು? ಅದರ ನೆಲೆ ಹೇಗೆ? ವಿಷಯ ಆಯ್ಕೆ, ಇತಿಹಾಸ ವಿವೇಚನೆ, ವಸ್ತು ಪರಾಮರ್ಶೆ, ಅಧ್ಯಯನ ಕ್ರಮ, ವಿಧಾನ, ಲಾಕ್ಷಣಿಕ ಸಹಕಾರ, ರಚನಾತ್ಮಕ ಉದ್ದೇಶ, ಅಭ್ಯಾಸ, ಕ್ಷೇತ್ರ ಕಾರ್ಯ, ಶೈಕ್ಷಣಿಕ ನೆಲೆಗಟ್ಟು, ಪ್ರದರ್ಶನಾತ್ಮಕ ನೆಲೆ, ಸಾಮಾಜಿಕ ನಿಲುವು.., ಹೀಗೆ ಹಲವು ಹಂತದ ವರೆಗೂ ಹಲವು ಬಗೆಯಲ್ಲಿ ಗೊಂದಲಗಳೆದ್ದು ವ್ಯಾಖ್ಯಾನದ ಹೊಸಿಲು ಅರ್ಥವನ್ನು ಕಳೆದುಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ನಮ್ಮ ನೆಲೆಗಳನ್ನು ಪರಿಶೋಧಿಸುವ, ಅವಲೋಕಿಸುವ ಕ್ರಮಬದ್ಧ ಕಾರ್ಯ ಜರುಗುವ ಅವಶ್ಯಕತೆಯನ್ನು ಮನಗೊಂಡ **ನೂಪುರ ಭ್ರಮರಿ ನೃತ್ಯ ಸಂಶೋಧಕರ ಒಕ್ಕೂಟವು (Dance researchers' Forum)ಸದಸ್ಯರ ಆಶಯದ ಹಿನ್ನೆಲೆಯಲ್ಲಿ ದಿನಾಂಕ : 26 ಆಗಸ್ಟ್, 2102ರಂದು ಬೆಂಗಳೂರಿನ ಬಸವನಗುಡಿ ಸಮೀಪದ ಗೌರೀ ನಾಟ್ಯಶಾಲೆಯಲ್ಲಿ ಬೆಳಿಗ್ಗೆ 10ಗಂಟೆಯಿಂದ ಸಂಜೆ 5 ಗಂಟೆಯ ವರೆಗೆ ವಿಕಸನ ಗೋಷ್ಠಿ ಏರ್ಪಡಿಸಿತ್ತು.**

ಈ ಒಂದು ದಿನದ ಕಾರ್ಯಕ್ರಮದ ಸಂವಿಧಾನವು ಶಾಸ್ತ್ರವೇತ್ತ ವಾಕ್ಯವೊಂದನ್ನು ಕೊಟ್ಟು ಅದರ ಪರ–ವಿರೋಧ ಅಭಿಪ್ರಾಯ ಮಂಡನ, ವಿಷಯವಿಶ್ಲೇಷಣೆ ಮಾಡುವ ವಾಕ್ಯಾರ್ಥ ಗೋಷ್ಠಿಯ ಮಾದರಿ ಯಲ್ಲಿತ್ತಾದರೂ ; ನೃತ್ಯಾದಿ ಕಲೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಬೇಕಾದ ಅರ್ಥಸಂಪತ್ತಿಗಾಗಿ ಪ್ರಾರಂಭಿಕ ಹೆಜ್ಜೆಯೆಂಬಂತೆ ಶಬ್ದ ವಿಕಸನವನ್ನು ಹಮ್ಮಿಕೊಳ್ಳಲಾಗಿತ್ತು. ಇಲ್ಲಿ ಶಬ್ದವೊಂದನ್ನು ಕಲಾವಿಕಸನದ ಹಿನ್ನೆಲೆಯಲ್ಲಿ ಒಂದೊಂದಾಗಿ ಕೈಗೆತ್ತಿಕೊಂಡು; ಅದರ ಆಳ ವಿಶ್ಲೇಷಣೆ, ವಾದಿ–ಪ್ರತಿವಾದಿ ನೆಲೆ, ಅಭಿಪ್ರಾಯಮಂಡನಗಳು ನಡೆದು ಅದಕ್ಕೆ ಸಂಬಂಧಿತವಾದ ಸ್ವವ್ಯಾಖ್ಯಾನಗಳನ್ನು ಕೊಡುವ ಕಾರ್ಯ ನಡೆದಿತ್ತು. ಪ್ರಾಥಮಿಕವೆನಿಸುವ ಅದೆಷ್ಟೋ ಶಬ್ದಗಳು ವಿಶ್ಲೇಷಿಸಹೊರಟಾಗ ಕಲಾವಿದರ, ಸಂಶೋಧಕರ ಗಮನಕ್ಕೆ ಇದುವರೆಗೂ ಅಷ್ಟಾಗಿ ಇಣುಕದ ಅದೆಷ್ಟೋ ಕ್ಲಿಷ್ಟಕರ ಆಯಾಮವನ್ನು ಹೊಂದಿದೆ ಎಂಬುದು ಇಲ್ಲಿ ಅರಿವಿಗೆ ಬಂದಂಥ ವಿಷಯ.

ಈ ಹಿನ್ನೆಲೆಯಲ್ಲಿ ವಿಕಸನ ಗೋಷ್ಠಿ– 1ರಲ್ಲಿ ಪ್ರಮುಖವಾಗಿ ಚರ್ಚಿತವಾದ ಅಂಶಗಳ ಸಂಕ್ಷಿಪ್ತ ನೋಟ ಕೆಳಕಂಡಂತಿದೆ.

1. ಕಲೆ ಎಂದರೇನು? ಅದರ ಮಾನದಂಡಗಳೇನು? ಪ್ರಮೇಯವೊಂದರ (ಥಿಯರಿ) ನಿರೂಪಣೆ. ಆ ಹಿನ್ನೆಲೆಯಲ್ಲಿ ಸದಸ್ಯರಿಂದ ಸ್ವವ್ಯಾಖ್ಯಾನ.
2. ಕಲಾವಿಕಾಸ ಮತ್ತು ಉತ್ಪತ್ತಿ.
3. ನೃತ್ಯೋತ್ಪತ್ತಿ ಮತ್ತು ಮಾನವಜನಾಂಗೀಯ ಅಧ್ಯಯನದ ಹಿನ್ನೆಲೆಯಲ್ಲಿ ನೃತ್ಯದ ಬಗೆಗಳು. ಪ್ರಾಗಿತಿಹಾಸ ಕಾಲದಿಂದ ಮೊದಲ್ಗೊಂಡ ನೃತ್ಯದ ವರ್ಗೀಕರಣ, ನಕ್ಷತ್ರಾಕಾರ ಮತ್ತು ಪಿರಮಿಡ್ಡಿನ ವಿನ್ಯಾಸದ ಆಧಾರದಲ್ಲಿ ನೃತ್ಯದ ವಿಧಗಳು.
4. ನೃತ್ತ– ನಾಟ್ಯಶಾಸ್ತ್ರೀಯ ದೃಷ್ಟಿಕೋನ ಮತ್ತು ಆಧುನಿಕ ಸ್ಥಿತಿ ವಿಶ್ಲೇಷಣೆ
5. ಇದರೊಂದಿಗೆ ನೃತ್ಯಗುರುಗಳು ಪೋಷಕರು ಮತ್ತು ವಿದ್ಯಾರ್ಥಿಗಳ ಅರಿವಿನ ದೃಷ್ಟಿಯಿಂದ ಅಳವಡಿಸಿಕೊಳ್ಳಬೇಕಾದ ಸೂಚನೆಗಳು, ಪ್ರಾದೇಶಿಕ ಅರ್ಥೈಸುವಿಕೆಯ ದೃಷ್ಟಿಯಿಂದ ಕನ್ನಡ ಭಾಷೆಯಲ್ಲಿ ನೃತ್ಯವಸ್ತುಗಳ ಚಿಂತನೆಯ ಕುರಿತಾಗಿ ಚರ್ಚೆಗಳು ನಡೆದವು.

<u>**ವಿಕಸನ ಗೋಷ್ಠಿ –1 ರ ನಿರ್ಣಯಗಳು**</u>

1. Performing artiste ಮತ್ತು visual artist ಅರ್ಥ ವಿನ್ಯಾಸವನ್ನು ಅರಿತುಕೊಂಡು ಭವಿಷ್ಯದಲ್ಲಿ ಎಲ್ಲಾ ಸದಸ್ಯರು ತಮ್ಮ ನೃತ್ಯ ಬದುಕಿನಲ್ಲಿ **artiste** ಎಂಬ ಪದವನ್ನು ಬಳಕೆ ಮಾಡುವುದು.

2. ಇಂದಿನ ಕಾಲಘಟ್ಟದಲ್ಲಿ ತಪ್ಪಾಗಿ ಬಳಕೆಯಾಗುತ್ತಿರುವ **ಜನಪದ ಮತ್ತು ಜಾನಪದ**ವನ್ನು ನೃತ್ಯಸಂದರ್ಭಗಳಿಗೆ ಅನ್ವಯಿಸುವಾಗ **ಜಾನಪದ**ಗಳೆಂದೇ ಕರೆಯುವುದು. ಉದಾಹರಣೆಗೆ : ಜನಪದ ಸಂಸ್ಕೃತಿ, ಜಾನಪದ ಸಂಗೀತ. ಜನಪದ ಮೂಲ ಅಸ್ತಿತ್ತ್ವವಾದರೆ ಜಾನಪದವೆಂಬುದು ಜನಪದದ ಒಂದು ಭಾಗವನ್ನು, ಉತ್ಪತ್ತಿಯನ್ನು ಹೇಳುವ ಸೂಚನೆ.

3. ಭಾರತೀಯ ನೃತ್ಯಸಂಸ್ಕೃತಿಯಲ್ಲಿ ಅವೈಜ್ಞಾನಿಕವಾಗಿ ಚಾಲ್ತಿಗೆ ಬಂದಿರುವ ಶಬ್ದಗಳಾದ **Folk, classical** ಗಳನ್ನು ನೃತ್ಯವಿಧ ವಿಶ್ಲೇಷಣೆಯ ಹಂತದಲ್ಲಿ ಸಂಪೂರ್ಣ ಕೈಬಿಡುವುದು. ಮತ್ತು 'ಜಾನಪದ ಕೀಳು, ಶಾಸ್ತ್ರೀಯ ಹೆಚ್ಚುಗಾರಿಕೆ ಇರುವಂತದ್ದು' ಎಂಬ ದೃಷ್ಟಿಕೋನದ ಕಪೋಲಕಲ್ಪಿತ ವಾದಗಳನ್ನು ಪುರಸ್ಕರಿಸದಿರುವುದು. ಈಗಾಗಲೇ ಭ್ರಮಿಸಲಾದ 'ಜನಪದ ನೃತ್ಯ'ಗಳಿಗೂ ಅದರದ್ದೇ ಆದ ಶಾಸ್ತ್ರಗಳಿರುವುದರಿಂದ ನೃತ್ಯಗಳನ್ನು ಜಾನಪದ, ಶಾಸ್ತ್ರೀಯ ಎಂದು ಕರೆದು ಗುಣಮಟ್ಟ ನಿರ್ಧರಿಸುವುದು ಒಳಿತಲ್ಲ. ಬದಲಾಗಿ ನೃತ್ಯವಿಧಗಳನ್ನು ವಿಶ್ಲೇಷಣೆ ಮಾಡುವ ಹಂತದಲ್ಲಿ ಅವುಗಳನ್ನು ಸಾಮಾಜಿಕ, ಧಾರ್ಮಿಕ, ಸಾಂಪ್ರದಾಯಿಕ, ವಿದೇಶೀ, ಸಮಕಾಲೀನ, ಆಚರಣಾತ್ಮಕ, ಅನುಕರಣಾತ್ಮಕ ಎಂಬುದಾಗಿ ಪ್ರಾಗಿತಿಹಾಸಕಾಲದಿಂದಲೂ ವಿಶ್ಲೇಷಣೆಗೆ ಒದಗುವ ನೃತ್ಯಗಳ ಹಿನ್ನೆಲೆಯಲ್ಲಿ ಆಳವಾಗಿ ವಿಭಾಗಿಸಿ ಆಯಾಯ ನೃತ್ಯಗಳಿಗೆ ಹೊಂದುವ ಹೆಸರಿನಿಂದ ಕರೆಯುವುದು. ಉದಾಹರಣೆಗೆ : **ಭರತನಾಟ್ಯ, ಕೂಚಿಪುಡಿ, ಒಡಿಸ್ಸಿ, ಕಥಕ್, ಮಣಿಪುರಿ, ಸತ್ರಿಯಾ, ಮೋಹಿನಿಯಾಟ್ಟಂ ಇತ್ಯಾದಿ ನೃತ್ಯಗಳನ್ನು ಶಾಸ್ತ್ರೀಯ ನೃತ್ಯಗಳೆಂದು ಕರೆಯುವ ಬದಲಿಗೆ ಅವು ವಿಶಾಲಾರ್ಥದಲ್ಲಿ ಒಂದೊಂದು ಪ್ರಾಂತದ ಪಾರಂಪರಿಕ ನೃತ್ಯಗಳ ಸಾಲಿಗೆ ಸೇರುವುದರಿಂದ ಅವುಗಳನ್ನು ಇನ್ನು ಮುಂದೆ ಪ್ರಾಂತೀಯ ಪಾರಂಪರಿಕ ನೃತ್ಯಗಳೆಂದು ಕರೆಯುವುದು.**

4. **ಪರಂಪರೆ ಮತ್ತು ಸಂಪ್ರದಾಯ ಇವೆರಡರ ಅರ್ಥ ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳಿದು ಉಪಯೋಗಿಸುವುದು.** ಪರಂಪರೆ ಎಂಬುದು ಪರಂ ಪರಂ ಎಂಬ ಎರಡು ಸಂಸ್ಕೃತ ಶಬ್ದಗಳ ಜನ್ಯ. ಇದರರ್ಥ ಮತ್ತೆ ಮತ್ತೆ ಅಥವಾ ಪುನಾ ಪುನಾ ಹೇಳುವುದು ಅಥವಾ ಆಚರಿಸುವುದು. ಸಂಪ್ರದಾಯವೆಂಬುದು 'ಕೊಡಲ್ಪಟ್ಟ' ಎಂಬ ಅರ್ಥ ಕೊಡುವುದು. ಯಾವುದೇ ವಿದ್ಯೆ, ವಿಷಯಗಳು ಕೊಡಲ್ಪಡಬೇಕಾದರೆ ಶ್ರುತಿ–ಸ್ಮೃತಿ ಪದ್ಧತಿಯ ಆಧಾರದಲ್ಲಿ ದೃಢವಾಗಿರಬೇಕು; ಶಾಸ್ತ್ರ ಸಮ್ಮತವಾಗಿರಬೇಕು; ನಿರ್ವಿವಾದವಾಗಿರಬೇಕು. ಆದ್ದರಿಂದ ಸಂಪ್ರದಾಯವೆಂಬುದು ಅನಾದಿ ಕಾಲದ ಆಧಾರಭೂತಮಾರ್ಗವೆಂದು ಅರ್ಥ ಪಡೆದುಕೊಂಡರೆ; ಗುರು ಅಥವಾ ಸ್ಥಾಪಕರಿಂದ ಚಾಲ್ತಿಗೆ ಬಂದ, ಆಯುಷ್ಯದ ದೃಷ್ಠಿಯಿಂದ ದೀರ್ಘವಲ್ಲದ್ದು ಪರಂಪರೆ ಎಂದು ಕರೆಯಲ್ಪಡುತ್ತದೆ. **ಈ ಹಿನ್ನೆಲೆಯಲ್ಲಿ ಭರತನಾಟ್ಯ ಮುಂತಾದ ನೃತ್ಯಗಳನ್ನು ಸಂಪ್ರದಾಯ ಎನ್ನುವುದಕ್ಕಿಂತ ಪರಂಪರೆ ಎನ್ನುವುದು ಸೂಕ್ತ.**

5. ಕನ್ನಡ ನಾಡಿನ ಕಲಾವಿದರು, ಒಕ್ಕೂಟದ ಸಂಶೋಧನಾ ಸದಸ್ಯರು ತಮ್ಮ **ನೃತ್ಯ ವಸ್ತುವಿನಲ್ಲಿ ಕನ್ನಡತನವನ್ನು, ಕನ್ನಡ ಸಾಹಿತ್ಯವನ್ನು ಬಳಸುವುದು** ಪ್ರಾದೇಶಿಕ ಅರ್ಥವಂತಿಕೆಯ ದೃಷ್ಟಿಯಿಂದ ಕ್ಷೇಮ ಮತ್ತು ಕಡ್ಡಾಯ.

6. **ಪ್ರೇಕ್ಷಕರು(spectator), ಮತ್ತು ಶ್ರೋತೃ(audience) ಗಳ ನಡುವಿನ ಅರ್ಥವ್ಯತ್ಯಾಸ** ಅರಿತು ನೃತ್ಯ ಸಂದರ್ಭಕ್ಕೆ, ಬರೆವಣಿಗೆಗೆ **ಪ್ರೇಕ್ಷಕರು, ಸಹೃದಯರು, ರಸಿಕರು** ಎಂದೇ ಸಂಬೋಧಿಸುವುದು.

7. ಕಥಕಳಿ ಕಲಾಪ್ರಕಾರವು ನಾಟ್ಯಸಂಪ್ರದಾಯಕ್ಕೇ ಸೇರಿದುದರಿಂದ ಅದನ್ನು ನೃತ್ಯವಿಭಾಗಕ್ಕೆ ಸೇರಿಸಿರುವುದನ್ನು ಕೈಬಿಡುವುದು.

### ವಿಕಸನ ಗೋಷ್ಠಿ ಭಾಗ –2

**ವಿಕಸನ ಗೋಷ್ಠಿ ಭಾಗ –2 ಬೆಂಗಳೂರಿನಲ್ಲಿ ಅಕ್ಟೋಬರ್ 2ರಂದು ಗೌರೀ ನಾಟ್ಯಶಾಲೆಯಲ್ಲಿ ಬೆಳಗ್ಗೆ 10.30ರಿಂದ ಸಂಜೆ 5 ಗಂಟೆಯ ವರೆಗೆ ಜರುಗಿದ್ದು ; ಬೆಳಗ್ಗಿನ ಸಮಯದಲ್ಲಿ ಗೋಷ್ಠಿಯು ಪ್ರಮುಖವಾಗಿದ್ದು ಮಧ್ಯಾಹ್ನದ ನಂತರ ಸಂಶೋಧನಾ ಸಂವಿಧಾನಗಳ ಕುರಿತ ಚರ್ಚೆ ಮತ್ತು ಮಾರ್ಗದರ್ಶನ ನೀಡಲಾಯಿತು.** ಆ ಪೈಕಿ ಬೆಳಗ್ಗಿನ ಅವಧಿಯಲ್ಲಿ ನೃತ್ತ–ನೃತ್ಯ–ನಾಟ್ಯದ ಶಬ್ದ ವಿಕಸನದ ಕುರಿತು ಚರ್ಚೆಯನ್ನು ಪ್ರಧಾನವಾಗಿ ಕೈಗೆತ್ತಿಕೊಂಡು ಅವುಗಳ ಗುಣಧರ್ಮ ಮತ್ತು ಆಧಾರದಲ್ಲಿ ಪ್ರಸ್ತುತ ದಿನಮಾನದ ನೃತ್ಯಮಾದರಿಗಳ ವಿಶ್ಲೇಷಣೆಯನ್ನೂ ಮಾಡಲಾಯಿತು. ಮಧ್ಯಾಹ್ನದ ಅವಧಿಯಲ್ಲಿ ನೃತ್ಯ ಸಂಶೋಧನೆಯ ಕುರಿತಂತೆ ಸಂಶೋಧನಾ ಶಾಸ್ತ್ರದ ಮಾರ್ಗದರ್ಶನ ನೀಡಲಾಯಿತು.

### ಪ್ರಧಾನ ನಿರ್ಣಯಗಳು

1. ಭರತನಾಟ್ಯಾದಿ ಶಾಸ್ತ್ರೀಯವೆನಿಸಿದ ಪಾರಂಪರಿಕ ನೃತ್ಯಗಳಲ್ಲಿ ಪರಿಣತಿ ಪಡೆದವರನ್ನು ಸಂಬೋಧಿಸುವಾಗ **'ನಾಟ್ಯವಿದ್ವಾನ್', 'ನಾಟ್ಯವಿದುಷಿ' ಎಂಬ ಸೂಚನೆಗಳ ಬದಲಾಗಿ 'ನೃತ್ಯವಿದ್ವಾನ್', 'ನೃತ್ಯ ವಿದುಷಿ'ಗಳೆಂದು ಸಂಬೋಧಿಸುವುದು.**
2. ನೃತ್ತವನ್ನು **'pure dance' 'ಭಾವವಿಹೀನ' ಎಂಬೆಲ್ಲಾ ಅವೈಜ್ಞಾನಿಕ ಭಾಷಾಂತರದಿಂದ** ಉಂಟಾಗುವ ಲೋಪಗಳನ್ನು ಸರಿಪಡಿಸುವಲ್ಲಿ ಪ್ರಯತ್ನಿಸುವುದು;ಹಾಗೂ ನೃತ್ತವೆಂಬ ಶಬ್ದದ ಅರ್ಥವಿಸ್ತಾರವನ್ನು ಗಮನಿಸಿ **ಅಭಿನಯರಹಿತ ನೃತ್ಯಭಾಗವನ್ನು 'ನೃತ್ತ' ಎಂದು ಕರೆಯುವುದನ್ನು ಸಂಪೂರ್ಣವಾಗಿ ಕೈಬಿಡುವುದು.**

ಗೋಷ್ಠಿಗಳೆರಡರಲ್ಲೂ ಒಕ್ಕೂಟದ ಸಂಚಾಲಕಿ, ಆಡಳಿತ ವಿಭಾಗ ನಿರ್ದೇಶಕಿ ಮನೋರಮಾ ಬಿ.ಎನ್ ಪ್ರಾಸ್ತಾವಿಕವಾಗಿ ಮಾತನಾಡಿ ಅಂತ್ಯದಲ್ಲಿಯೂ ಗೋಷ್ಠಿಯ ನಿರ್ಣಯಗಳನ್ನು ವಾಚಿಸಿ ವಂದಿಸಿದರು. ಒಕ್ಕೂಟದ ಶೈಕ್ಷಣಿಕ ವಿಭಾಗ ಮುಖ್ಯಸ್ಥೆ ಡಾ. ಕರುಣಾ ವಿಜಯೇಂದ್ರ ಅವರು ಪ್ರಧಾನಗೋಷ್ಠಿಗಳನ್ನು ನಿರ್ವಹಿಸಿದರು.

ವಿಕಸನ ಗೋಷ್ಠಿ ಭವಿಷ್ಯದ ನಮ್ಮ–ನಿಮ್ಮೆಲ್ಲರ ನಡುವಿನ ಚಿಂತನ–ಮಂಥನಗಳಿಗೆ, ಸಂಶೋಧನಾ ನೋಟಕ್ಕೆ, ಸಂಶೋಧನಾರ್ಥಿಗಳಾದ ನಮ್ಮೆಲ್ಲರ ನೆಲೆಗಳನ್ನು ಅರಿಯುವ, ಅರಿತು ಬೆಳೆಯುವ ನಿಟ್ಟಿನಲ್ಲಿ ಈ ವೇದಿಕೆ ಹೊಸ ಆಯಾಮವನ್ನು ತಂದಿಟ್ಟಿದೆ. ಇದು ಮುಂದಿನ ದಿನಗಳ ಹಲವು ಕಾರ್ಯಕ್ರಮ, ವಿಚಾರಸಂಕಿರಣ, ವಾರ್ಷಿಕ ಸಮ್ಮೇಳನಗಳ ಒಟ್ಟಾರೆ ಸಂಶೋಧನಾ ಹರಹುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಮಾನವಾದ ಪೂರಕ, ಪೋಷಕ ಮನಸ್ಥಿತಿಯನ್ನು ಬೆಳೆಸಿಕೊಳ್ಳುವಲ್ಲಿ ಮೊದಲ ಹೆಜ್ಜೆಯೆಂಬಂತೆ ನಮ್ಮೆಲ್ಲರೊಳಗಿನ ಯೋಚನೆಗಳನ್ನು ವಿಸ್ತಾರವಾಗಿಡುವಲ್ಲಿ ತಪ್ಪು–ಒಪ್ಪುಗಳನ್ನು ಅರಿತು ನಡೆಯುವಲ್ಲಿ, ಸೂಕ್ತ ಮಾದರಿಯನ್ನು ನಿರ್ಮಿಸಿಕೊಡುವಲ್ಲಿ ಇದು ನೀಡಿದ ಅನುಭವ ಅನನ್ಯವೆಂಬುದಂತೂ ನಿಜ.

<u>ವಿ.ಸೂ :</u> ನೃತ್ಯ ಸಂಶೋಧಕರ ಒಕ್ಕೂಟದ ಸದಸ್ಯರಿಗೆ ಮಾತ್ರ ಗೋಷ್ಠಿಯಲ್ಲಿ ಅವಕಾಶ. ಏಕೆಂದರೆ ಸದಸ್ಯರ ಆಶಯ, ಸಮಸ್ಯೆಗಳನ್ನು ಅರಿತು ಅದಕ್ಕೆ ತಕ್ಕುದಾಗಿ ಪ್ರತಿಸ್ಪಂದಿಸಿ ಪೂರಕವಾದ ಸಂಶೋಧನಾ ವಾತಾವರಣ ನಿರ್ಮಿಸುವುದು ಇಲ್ಲಿನ ಲಕ್ಷ್ಯ. ಜೊತೆಗೆ ಅಪೇಕ್ಷಿತರಿಗೆ ವಿವಿಧ ವಸ್ತು ವಿಷಯಗಳಲ್ಲಿರುವ ಸಂದೇಹ ನಿವಾರಣೆ, ಮಾರ್ಗದರ್ಶನ, ವಿಚಾರಸಂಕಿರಣದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಇಚ್ಛೆ ಪಡುವವರಿಗೆ ವಿಷಯ ದಿಗ್ದರ್ಶನ, ಮಾಹಿತಿಯೂ ಲಭ್ಯವಿರುತ್ತದೆ. ಗೋಷ್ಠಿಗಳಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳಿಗೆ ಎಲ್ಲಾ ಸದಸ್ಯರೂ ಜವಾಬ್ದಾರರು ಮತ್ತು ಆ ನಿರ್ಣಯಗಳನ್ನು ತಮ್ಮ ನೃತ್ಯಬದುಕಿನಲ್ಲಿ ಅನುಸರಿಸಬೇಕಾದವರಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಆಸಕ್ತರು ಒಕ್ಕೂಟಕ್ಕೆ ಸದಸ್ಯರಾಗಲಿಚ್ಛಿಸಿದರೆ ಮುಕ್ತ ಅವಕಾಶವಿದೆ. ಸಂಪರ್ಕಿಸಿ : 9964140927, www.noopurabhramari.com

**ನೃತ್ಯ ಸಂಶೋಧಕರ ಒಕ್ಕೂಟದಿಂದ ವಿಭಿನ್ನ ನೃತ್ಯವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮದ ಅವಧಿ, ಆಸಕ್ತಿ ಮತ್ತು ಅಪೇಕ್ಷೆಗೆ ಅನುಗುಣವಾಗಿ ಉಪನ್ಯಾಸ, ಕಮ್ಮಟ, ಕಾರ್ಯಾಗಾರಗಳನ್ನು ನಡೆಸಲಾಗುತ್ತಿದ್ದು; ವಿಷಯ ಪರಿಣತರು ಇವುಗಳನ್ನು ನಡೆಸಿಕೊಡುತ್ತಾರೆ. ನಾಟ್ಯಶಾಸ್ತ್ರಾಧಾರಿತವಾದ ಪ್ರಾಯೋಗಿಕನೆಲೆಗಳ ಪ್ರಸ್ತುತಿ ಮತ್ತು ಕಲಿಕೆಗೂ ಅನುಕೂಲಗಳಿವೆ. ಆಸಕ್ತ ನೃತ್ಯ ಗುರುಗಳು, ಸಂಶೋಧನಾಸಕ್ತರು ನೃತ್ಯ ಸಂಶೋಧಕರ ಒಕ್ಕೂಟವನ್ನು ಸಂಪರ್ಕಿಸಬಹುದು.**



# ನೃತ್ಯ ಸಂಶೋಧನಾ ಸಮ್ಮೇಳನ

## 'ನೃತ್ಯ ಸಂಶೋಧನೆ : ಸವಾಲು ಮತ್ತು ಸಾಧ್ಯತೆಗಳು'

**ಅವಿಚ್ಛಿನ್ನವಾದ ನೃತ್ಯಸಂಸ್ಕೃತಿಗೆ ಸಂಬಂಧಿಸಿದಂತೆ ವಸ್ತುನಿಷ್ಠ ಅಧ್ಯಯನ, ಕ್ರಮಬದ್ಧವಾದ ಸಂಶೋಧನಾಕ್ರಮ ಮತ್ತು ಅವಕಾಶಗಳಿಗಾಗಿ ಒಂದು ದಿನದ ಸಂಶೋಧನಾ ಸಮ್ಮೇಳನವನ್ನು ನೂಪುರ ಭ್ರಮರಿ ಪ್ರತಿಷ್ಠಾನದ ಅಂಗಸಂಸ್ಥೆಯಾದ Dance researchers' Forum (ನೃತ್ಯ ಸಂಶೋಧಕರ ಒಕ್ಕೂಟ)ವು ಫೆಬ್ರವರಿ 15, 2013ರಂದು ಬೆಂಗಳೂರಿನಲ್ಲಿ ಆಯೋಜಿಸಲಿದೆ. ಈ ನಿಟ್ಟಿನಲ್ಲಿ ಆಸಕ್ತ ಸಂಶೋಧಕರು, ಹಿರಿಯ ಕಲಾವಿದರು, ಸಂಶೋಧನಾ ವಿದ್ಯಾರ್ಥಿಗಳಿಗೆ (ಪಿಎಚ್‌ಡಿ/ಎಂಎ/ಎಂಫಿಲ್) ಸಂಶೋಧನಾ ಲೇಖನಗಳ ಮಂಡನೆಗೆ ಅವಕಾಶವಿದ್ದು; ಲೇಖಕರು–ವಿದ್ವಾಂಸರು–ಮಾಧ್ಯಮ ಪ್ರತಿನಿಧಿಗಳು–ವಿದ್ಯಾರ್ಥಿಗಳೂ ಸಮ್ಮೇಳನಾಭ್ಯರ್ಥಿಗಳಾಗಿ ಭಾಗವಹಿಸಬಹುದು.**

**ಸಮ್ಮೇಳನದ ಪ್ರಮುಖ ವಿಷಯಗಳು: ನೃತ್ಯ ಇತಿಹಾಸ, ನೃತ್ಯಶೈಲಿಯ ಪುನರ್ ರಚನೆ ಮತ್ತು ಮಾಧ್ಯಮ ಸಂಬಂಧ ವಿಶ್ಲೇಷಣೆ.**

### ನಿಯಮಾವಳಿಗಳು

- ಸಂಶೋಧನಾ ಲೇಖನವು ನೂತನವಾಗಿದ್ದು ಈ ಹಿಂದೆ ಎಲ್ಲಿಯೂ ಮಂಡನೆಯಾಗಲೀ, ಪ್ರಕಟವಾಗಲೀ ಆಗಿರಕೂಡದು. ಕನ್ನಡ/ಇಂಗ್ಲೀಷ್/ಹಿಂದಿ ಭಾಷೆಯಲ್ಲಿ ಪ್ರಬಂಧ ಮಂಡಿಸಬಹುದಾದರೂ ಬರೆವಣಿಗೆ ಮಾತ್ರ ಕನ್ನಡ ಅಥವಾ ಇಂಗ್ಲೀಷ್‌ನಲ್ಲಿರಬೇಕು. ನೃತ್ಯಸಂಸ್ಕೃತಿಪರವಾದ ಪ್ರಾಯೋಗಿಕ ನೆಲೆಯುಳ್ಳ ಪ್ರವೇಶಗಳಿಗೆ ಮೊದಲ ಆದ್ಯತೆ. ವಿಚಾರಪ್ರಸ್ತಾಪಗಳು ನೃತ್ಯದ ಶಾಸ್ತ್ರೀಯತೆ, ವ್ಯಾಖ್ಯಾನ, ಶೈಕ್ಷಣಿಕ ನೆಲೆ, ಸಮಕಾಲೀನ ಬೆಳವಣಿಗೆ, ಸಾಮಾಜಿಕ ಪರಿಕಲ್ಪನೆ, ಸಂಗೀತ, ಜನಪದಗಳ ನಿಟ್ಟಿನಲ್ಲೂ ಇರಬಹುದು. ಯಾವುದೇ ಭಾಷಾ/ಪ್ರಾದೇಶಿಕ ಮಿತಿಗಳಿರುವುದಿಲ್ಲ.
- ಲೇಖನ ಪ್ರಕಟಣೆಯ ಸಂಪೂರ್ಣ ಹಕ್ಕು ಪ್ರತಿಷ್ಠಾನದ್ದು. ಸಮ್ಮೇಳನದ ತರುವಾಯ ಲೇಖನಗಳ ಸಂಪೂರ್ಣ ಪ್ರತಿಯನ್ನು ಜಾಗತಿಕ ನೆಲೆಯಲ್ಲಿ ನಿಯತಕಾಲಿಕವಾಗಿ ಹೊರತರಲಾಗುವುದು. ಆದರೆ ಈ ಪ್ರಕಟಣೆಗೂ ಮುಂಚೆ ಲೇಖನ/ಪ್ರಬಂಧಗಳು ಮತ್ತಾವುದೇ ಪ್ರಕಟಣೆಯಲ್ಲಿ ಮಂಡಿತ/ಪ್ರಕಟಿತವಾದರೆ ಅಂತಹ ಲೇಖನಗಳನ್ನು ನಿಯತಕಾಲಿಕೆಯ ಪ್ರಕಟಣೆಯಲ್ಲಿ ತಡೆಹಿಡಿಯಲಾಗುವುದು. ಸಮ್ಮೇಳನದಲ್ಲಿ ಮಂಡಿತವಾದ ಲೇಖನಗಳನ್ನು ಸಮ್ಮೇಳನದ ತಜ್ಞರ ಸಲಹೆ ಸೂಚನೆಗಳಡಿಯಲ್ಲಿ ಸಮ್ಮೇಳನದ ದಿನದಿಂದ ಆರು ತಿಂಗಳ ಒಳಗಾಗಿ ಎಲ್ಲಾ ಕ್ರಮಬದ್ಧವಾದ ದಾಖಲೆಗಳೊಂದಿಗೆ ಒಕ್ಕೂಟಕ್ಕೆ ತಲುಪಿಸಲು ಅವಕಾಶವಿದ್ದು; ಸಮಯಮಿತಿ ಮೀರಿದವರನ್ನು ಪರಿಗಣಿಸಲಾಗುವುದಿಲ್ಲ.
- ಸಂಶೋಧನಾ ಲೇಖನಗಳ ಸಂಕ್ಷೇಪವನ್ನು ಫುಲ್‌ಸ್ಕೇಪ್ ಹಾಳೆಯಲ್ಲಿ 3 ಪುಟ ಇಲ್ಲವೇ 300 ಪದ ಮೀರದಂತೆ ಸಂಶೋಧನಾ ನಿಯಮ ರೀತಿ–ನೀತಿಗಳಿಗನುಗುಣವಾಗಿ ಕಳಿಸಬೇಕು. ಈಮೇಲ್ ಮೂಲಕ ಪ್ರವೇಶಗಳನ್ನು ಕಳಿಸಲು ಅವಕಾಶವಿದೆ. ಲೇಖನಗಳು ಸೈದ್ಧಾಂತಿಕವಾಗಿ ಇಲ್ಲವೇ ಪ್ರಾಯೋಗಿಕವಾಗಿ ಪ್ರಾತ್ಯಕ್ಷಿಕೆಯ ನೆಲೆಯಲ್ಲಿಯೂ ಇರಬಹುದು. ಲೇಖನಗಳಿಗೆ ಪೂರಕವಾದ ಪ್ರಾತ್ಯಕ್ಷಿಕೆಯ ನೆಲೆಗಳನ್ನು ಅಭ್ಯರ್ಥಿಗಳೇ ಹೊಂದಿಸಿಕೊಳ್ಳಬೇಕು. ಸೈದ್ಧಾಂತಿಕವಾದ ಲೇಖನಗಳಿಗೆ ಪ್ರಾಯೋಗಿಕಸ್ಪರ್ಶದ ಅಗತ್ಯವಿದ್ದಲ್ಲಿ ಅದನ್ನು ಅಭ್ಯರ್ಥಿಗಳು ನೆರವೇರಿಸಲು ಸಿದ್ಧವಿರಬೇಕು. ಸಂಕ್ಷೇಪದಲ್ಲಿ ಲೇಖನದ ಶೀರ್ಷಿಕೆ, ರಚನಕಾರರ ಸಹಭಾಗಿತ್ವ, ಸಂಶೋಧನಾ ಉದ್ದೇಶ, ಅಧ್ಯಯನ ವಿಧಾನ–ಕ್ರಮ–ನಡಾವಳಿ–ತರ್ಕ–ಆಧಾರಗಳು ಸ್ಪಷ್ಟವಾಗಿ ಮತ್ತು ಸಮಗ್ರವಾಗಿ ನಿರೂಪಿಸಲ್ಪಟ್ಟಿರಬೇಕು. ಪ್ರತ್ಯೇಕ ಹಾಳೆಯಲ್ಲಿ ಸ್ವವಿವರ, ಲೇಖಕರ ಸಂಶೋಧನಾ ಹಿನ್ನಲೆ, ಸಂಪರ್ಕ ವಿಳಾಸ, ಈಮೈಲ್ ವಿಳಾಸ, ದೂರವಾಣಿ ಸಂಖ್ಯೆಗಳನ್ನು ನಮೂದಿಸಬೇಕು.

- ಲೇಖನಗಳನ್ನು ಸೂಕ್ತವಾಗಿ ವಿಭಾಗಿಸಿ ಆಯ್ಕೆ ಮಾಡಿದ ತರುವಾಯ ಅವಕಾಶ ನೀಡಲಾಗುವುದು. ಸೂಕ್ತವೆನಿಸುವ ಲೇಖನಗಳು ಸಮ್ಮೇಳನದಲ್ಲಿ ಮಂಡನೆಗೆ ಅರ್ಹವಾಗಲಿದ್ದು; ಲೇಖನದ ಸತ್ವ ಮತ್ತು ಸಮಯದ ಮಿತಿಯಲ್ಲಿ ಮಂಡನೆ ಮತ್ತು ಪ್ರಶ್ನೋತ್ತರ ಸಮಯದ (5ರಿಂದ 7 ನಿಮಿಷ) ಅವಕಾಶವನ್ನೀಯಲಾಗುವುದು. ಆದಾಗ್ಯೂ ತಜ್ಞರು ಅಪೇಕ್ಷಿಸಿದಲ್ಲಿ ವಿಷಯದ ವಿಸ್ತಾರವನ್ನು ಅವಲಂಬಿಸಿ ಚರ್ಚೆ ಮುಂದುವರಿಯಬಹುದು. ಈ ಕುರಿತಂತೆ ಲೇಖನಗಳ ಆಯ್ಕೆಯ ಕುರಿತ ನಿರ್ಧಾರವನ್ನು ಸಂಕ್ಷೇಪ ತಲುಪಿದ 10 ದಿನದೊಳಗೆ ನೀಡಲಾಗುವುದು. ಈ ಸಂದರ್ಭದಲ್ಲಿ ಲೇಖಕರು ಪೂರ್ಣ ಪ್ರತಿಯನ್ನು ಸಲ್ಲಿಸಬೇಕಾಗುತ್ತದೆ. ತರುವಾಯ ಬಂದ ಲೇಖನಗಳಿಗೆ ಅವಕಾಶವಿರುವುದಿಲ್ಲ.
- ಸಂಶೋಧನಾ ಲೇಖನ ಮಂಡಿಸುವವರಿಗೆ 21 ವರ್ಷ ಪೂರ್ಣಗೊಂಡಿದ್ದು ; ಕನಿಷ್ಠಪಕ್ಷ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಪೂರ್ಣಗೊಳಿಸಿರಬೇಕು. ವಿದ್ವತ್ಪೂರ್ಣ ಸಂಶೋಧಕರಿಗೆ ಕಮ್ಮಟದ ಸಮಾಲೋಚನೆಯಲ್ಲಿ ಭಾಗವಹಿಸಲು ಅವಕಾಶವಿದೆ. ಈ ಕುರಿತಂತೆ ಆಸಕ್ತರು ಮುಂಚಿತವಾಗಿ ಹೆಸರು ನೋಂದಾಯಿಸಬೇಕು. ಸಮ್ಮೇಳನದ ಸಮಾರೋಪದಲ್ಲಿ ಅಭ್ಯರ್ಥಿಗಳಿಗೆ ಮತ್ತು ಸಂಶೋಧನಾಲೇಖನ ಮಂಡನೆ ಮಾಡುವವರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು.
- ಸಮ್ಮೇಳನದಲ್ಲಿ ಭಾಗವಹಿಸಿ ಪ್ರಮಾಣಪತ್ರ ಪಡೆದುಕೊಳ್ಳಬೇಕೆಂದಿರುವ ಅಭ್ಯರ್ಥಿಗಳಿಗೆ ಪ್ರವೇಶ ಶುಲ್ಕ 300ರೂ. ಈ ಬಗೆಯಾಗಿ ಸಮ್ಮೇಳನದಲ್ಲಿ ಭಾಗವಹಿಸಲಿಚ್ಚಿಸುವ ಅಭ್ಯರ್ಥಿಗಳು 18ವರ್ಷ ಮೇಲ್ಪಟ್ಟವರಾಗಿದ್ದು; ಸಮ್ಮೇಳನದಲ್ಲಿ ಬೆಳಗ್ಗೆ ಹೆಸರು ನೋಂದಾಯಿಸಿಕೊಳ್ಳತಕ್ಕದ್ದು. ನೃತ್ಯದಲ್ಲಿ ಒಂದಷ್ಟು ಪ್ರೌಢ ಶಿಕ್ಷಣ, ಅನುಭವ ಅಥವಾ ಸಂಶೋಧನಾಸಕ್ತಿ ಹೊಂದಿದ್ದು ; ಸಂವಾದ ಮತ್ತು ಪ್ರಶ್ನೋತ್ತರ ಸರಣಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಉತ್ಸುಕರಾಗಿ ಭಾಗವಹಿಸುವಂತಿರಬೇಕು. ಪ್ರಯಾಣ ಭತ್ಯೆ, ವಸತಿ ಸೌಕರ್ಯಗಳನ್ನು ಅಭ್ಯರ್ಥಿಗಳೇ ಸ್ವಂತ ಖರ್ಚಿನಲ್ಲಿ ಭರಿಸಿಕೊಳ್ಳತಕ್ಕದ್ದು. ಸಮ್ಮೇಳನದಲ್ಲಿ ಮಾತ್ರ ಊಟೋಪಚಾರದ ವ್ಯವಸ್ಥೆಯಿರುತ್ತದೆ. ಇನ್ನುಳಿದಂತೆ ಆಸಕ್ತ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ.
- **ಸಂಶೋಧನಾ ಲೇಖನ ಮಂಡಿಸುವವರಿಗೆ ಪ್ರವೇಶ ಶುಲ್ಕ – ನೃತ್ಯ ಸಂಶೋಧಕರ ಒಕ್ಕೂಟದ ಸದಸ್ಯರಿಗೆ: 450 ರೂ. ಸದಸ್ಯರಲ್ಲದ (ಆದರೆ ಕಳೆದ ವರ್ಷದ ವಿಚಾರಸಂಕಿರಣದಲ್ಲಿ ಭಾಗವಹಿಸಿದ )ಇನ್ನಿತರ ಲೇಖಕರಿಗೆ: 650 ರೂ. ಸಮ್ಮೇಳನದಲ್ಲಿ ಹೊಸದಾಗಿ ಲೇಖನ ಮಂಡಿಸುವ (ಸದಸ್ಯರಲ್ಲದ) ಸಂಶೋಧಕರಿಗೆ : 950ರೂ.** ಮೊತ್ತವನ್ನು ಲೇಖನ ಆಯ್ಕೆಯ ಬಳಿಕ ಪೂರ್ಣಪ್ರತಿ ಸಲ್ಲಿಸುವ ಸಮಯದಲ್ಲಿ 'ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ ಮನಿಟ್ರಾನ್ಸ್ಫರ್ ಮೂಲಕ ಕಳಿಸಬೇಕು.
- ಆಯ್ಕೆ ಸಮಿತಿಯ ತೀರ್ಪುಗಾರರ, ತಜ್ಞರ ನಿರ್ಧಾರವೇ ಅಂತಿಮ. ಗುಣಮಟ್ಟವಿಲ್ಲದ ಪ್ರಬಂಧಗಳಿಗೆ ಪದವಿ/ ಹಿರಿತನ/ಮಾನ್ಯತೆಗಳ ಯಾವುದೇ ದಾಕ್ಷಿಣ್ಯವಿಲ್ಲ. ಸಂಶೋಧನಾ ಲೇಖನಗಳ ಸಲ್ಲಿಕೆಗೆ ಕುರಿತಂತೆ ಮೇಲೆ ನಮೂದಿಸಲಾದ ನಿಯಮಗಳನ್ನು ಮೀರಿದಲ್ಲಿ ಅಂತಹ ಸಂಶೋಧಕರಿಗೆ ಮೂರು ವರ್ಷಗಳ ಕಾಲ ಸಮ್ಮೇಳನದಲ್ಲಿ ಪ್ರಬಂಧ ಸಲ್ಲಿಸಲು ಅವಕಾಶವಿರುವುದಿಲ್ಲ.
- ಸಂಶೋಧನಾ ಲೇಖನಗಳನ್ನು ಕಳಿಸಿದ ತರುವಾಯ ವೈಯಕ್ತಿಕ ಸಂಪರ್ಕಕ್ಕೆ, ಪ್ರಶ್ನೋತ್ತರಗಳಿಗೆ ಆಸ್ಪದವಿಲ್ಲ. ಆದರೆ ಸಂಶೋಧನಾ ಮಾರ್ಗದರ್ಶನ ಪಡೆದುಕೊಳ್ಳಬೇಕಿದ್ದಲ್ಲಿ ಸೂಕ್ತ ಸಮಯದಲ್ಲಿ ಸಂಪರ್ಕಿಸಬಹುದು.
- **ಸಂಕ್ಷೇಪ/ಪ್ರವೇಶಗಳನ್ನು ಕಳಿಸಿಕೊಡಲು ಅಂತಿಮ ದಿನಾಂಕ : ನವೆಂಬರ್ 25, 2013. ಪೂರ್ಣ ಲೇಖನದ ಪ್ರತಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ ಡಿಸೆಂಬರ್ 25, 2013.**

*ಪ್ರವೇಶಗಳನ್ನು ಕಳುಹಿಸಬೇಕಾದ ವಿಳಾಸ :*

**ನೂಪುರ ಭ್ರಮರಿ ನೃತ್ಯ ಸಂಶೋಧಕರ ಒಕ್ಕೂಟ (ಬೆಂಗಳೂರು ವಿಭಾಗ)**

**c/o ಶಾಲಿನಿ ವಿಠಲ್, ಗೌರೀ ನಾಟ್ಯಶಾಲಾ ಆವರಣ, ನಂ. 68(29), 2ನೇ ಅಡ್ಡರಸ್ತೆ**
**ಗವಿಪುರಂ ಬಡಾವಣೆ, ಬಸವನಗುಡಿ, ಬೆಂಗಳೂರು.**
**ದೂರವಾಣಿ: 9964140927**
**editor@noopurabhramari.com ; www. noopurabhramari.com**

# ನೃತ್ಯ ರಂಗದ ರಾಣಿ : ರುಕ್ಮಿಣಿ...

## (ಹೆಜ್ಜೆ : 16)

– 'ಮನೂ' ಬನ



**ಕಳೆದ ಸಂಚಿಕೆಯಲ್ಲಿ...**

(ರುಕ್ಮಿಣಿ ಕಲ್ಪಿಸಿದ, ಸಂಯೋಜಿಸಿದ ಅದೆಷ್ಟೋ ನೃತ್ಯಬಂಧಗಳಲ್ಲಿ ವಿಶೇಷವಾದುದೇನೂ ಇರಲಿಲ್ಲ. ಹಾಗಾಗಿ ಆಕೆಯನ್ನು ನರ್ತಕಿ, ಕಲಾವಿದೆಯಾಗಿ ನೋಡುವುದಕ್ಕಿಂತ ವಿವಿಧ ಬಗೆಯ ಸಮಕಾಲೀನ ಪ್ರಯೋಗಗಳಿಗೆ ತೆರೆದುಕೊಂಡು ಭರತನಾಟ್ಯವನ್ನು ಹೊಸದೃಷ್ಟಿಯಿಂದ ನೋಡಲು ಅನುವು ಮಾಡಿ ದವರು ಎನ್ನುವುದೇ ಸೂಕ್ತ. ಅವರು ಭರತನಾಟ್ಯಕ್ಕೆ ಸಂಬಂಧಿಸಿದಂತೆ ತಮಿಳು, ತೆಲುಗು ಭಾಷಾಕಲಿಕೆಗೆ ಪ್ರೋತ್ಸಾಹ ನೀಡುತ್ತಿದ್ದರೂ ಅವರ ಉಡುಗೆ ತೊಡುಗೆಗಳು ಭಾರತವನ್ನು ಪ್ರತಿನಿಧಿಸುತ್ತಿತ್ತೇ ವಿನಾ ಕೇವಲ ತಮಿಳುನಾಡಿಗೆ ಸೀಮಿತವಾಗಿರಲಿಲ್ಲ. ಅವರಿಗೆ ಜೀವನದ ಪ್ರತೀ ಹಂತವನ್ನೂ ರಸಾನುಭವ ದಿಂದ, ತೃಪ್ತಿಯಿಂದ ಬದುಕುವುದು ಇಷ್ಟ. ಅದಕ್ಕೆ ಪೂರಕವಾಗಿ ಥಿಯೋಸೋಫಿ, ಸಸ್ಯಹಾರಿ ಚಳುವಳಿ, ಕಲೆ ಮತ್ತು ಪ್ರಾಣಿದಯೆ ಅವರ 4 ದಿಕ್ಕುಗಳು. ಅಖಿಲ ಭಾರತ ಸಸ್ಯಹಾರಿಗಳ ಒಕ್ಕೂಟದ ಸ್ಥಾಪಕ ಅಧ್ಯಕ್ಷೆಯಾಗಿ, ಅಂತ ರ್ರಾಷ್ಟ್ರೀಯ ಸಸ್ಯಾಹಾರಿಗಳ ಕೂಟದ ಉಪಾಧ್ಯಕ್ಷೆಯಾಗಿ, ರಾಜ್ಯ ಸಭಾ ಸದಸ್ಯೆಯಾಗಿ, ಪ್ರಾಣಿ ಸಂರಕ್ಷಣಾ ಸಮಿತಿಯ ಪ್ರಧಾನಾಧ್ಯಕ್ಷೆಯಾಗಿ, ಪ್ರಾಣಿಹಿಂಸೆ ತಡೆ ಮಸೂದೆಯ ನೇತಾರರಾಗಿ ಅವರು ಯೋಜಿಸಿದ ಕಾರ್ಯಗಳು ಹಲವು. )

ಬಾಲ್ಯದಿಂದಲೂ ರುಕ್ಮಿಣಿಗೆ ಪ್ರಾಣಿಗಳ ಮೇಲೆ ಅತೀವಪ್ರೀತಿ. ಅವರಿಗೆ ನೃತ್ಯದ ಮೇಲೆ ಎಷ್ಟು ಒಲವೋ ಅದೇ ಬಗೆಯಲ್ಲಿ ಜೀವಿಗಳ ಮೇಲೂ ಒಲವು, ಆಪ್ತತೆ. ಅದಕ್ಕೆ ತಕ್ಕಂತೆ ಅವರು ಶುದ್ಧಸಸ್ಯಾಹಾರಿ. ಪ್ರತಿಯೊಂದು ಜೀವಿಗಳಲ್ಲೂ ಭಗವಂತನಿರುತ್ತಾನೆ ಎಂಬುದನ್ನು ಅವರು ತಮ್ಮ ನಡೆನುಡಿಯ ಮೂಲಕ ಸಾಕ್ಷೀಕರಿಸಿದ್ದರು. ಅವರ ಅಕ್ಕ ಶಿವಕಾಮು ಕೂಡಾ ಪ್ರಾಣಿದಯೆಯುಳ್ಳವರು. ಬ್ರಾಹ್ಮಣ ರಾದ್ದರಿಂದ ಸಸ್ಯಾಹಾರದ ಬಗ್ಗೆ ಇದ್ದ ಬದುಕಿನ ಶೈಲಿ ಪ್ರಾಣಿಗಳ ಕುರಿತು ಮತ್ತಷ್ಟು ತುಡಿಯುವಂತೆ ಮಾಡಿತ್ತು. ಮಸಾಲೆ, ಖಾರದ ಆಹಾರವೆಂದರೆ ಅವರಿಗೆ ಅಚ್ಚುಮೆಚ್ಚು. ಆದರೂ ವಿದೇಶ ಪ್ರಯಾಣಗಳಲ್ಲೂ ತಮ್ಮ ವ್ರತ ಕೆಡಿಸಿಕೊಳ್ಳಲಿಲ್ಲ.. 'ಸಸ್ಯಾಹಾರವು ವ್ಯಕ್ತಿ ಧಾರ್ಮಿಕವಾಗಿ, ಆರೋಗ್ಯವಾಗಿ, ಆರ್ಥಿಕವಾಗಿರಲು ಸಹಕಾರಿಯಾಗಿದೆ. ದೇಹವು ಸಸ್ಯಾಹಾರಕ್ಕಷ್ಟೇ ಸೂಕ್ತ. ಪ್ರಾಣಿಗಳ ದೇಹವನ್ನು ತಿನ್ನುವುದರಿಂದ ದೇಹವು ಸ್ಮಶಾನವಾಗುತ್ತದೆ' ಎನ್ನುವವರು ರುಕ್ಮಿಣೀ. ಇದರಿಂದಾಗಿ ಹಲವು ವಿದೇಶಿಯರು ಪ್ರಭಾವಿತಗೊಂಡು ಮಾಂಸಹಾರ ತ್ಯಜಿಸಿದರು. ಇಂತಹ ಚಳುವಳಿಯೇ ಜಾಗತಿಕವಾಗಿ ಮುಂದುವರಿದು ಅಂತರ್ರಾಷ್ಟ್ರೀಯ ಜಾಗೃತಿಯನ್ನು ಇಂದಿಗೆ ಹುಟ್ಟುಹಾಕಿದೆ.

ಹಿರಿಯ ವಿದ್ಯಾರ್ಥಿಯೊಬ್ಬರು ಹೀಗೆ ನೆನಪಿಸಿಕೊಳ್ಳುತ್ತಾರೆ. 'ಆಲದ ಮರದ ಕೆಳಗೆ ಪ್ರಾರ್ಥನೆ ಮಾಡುತ್ತಿದ್ದೆವು. ನಮ್ಮನ್ನೇ ಹಿಂಬಾಲಿಸುವ ಅಲ್ಲಿನ ಬೀದಿನಾಯಿಗಳನ್ನು ಅಟ್ಟುವ ಕೆಲಸ ನಮ್ಮದಾಗುತ್ತಿತ್ತು. ಅದನ್ನು ಗಮನಿಸಿದ ರುಕ್ಮಿಣಿ ಅತ್ತೆ ವಿದ್ಯಾರ್ಥಿಗಳನ್ನು ಪಕ್ಕಕ್ಕೆ ಕರೆದು ಹೇಳಿದ್ದರು– 'ಪ್ರಾಣಿಗಳು ಯಾವ ಬಗೆಯಲ್ಲೂ ತೊಂದರೆ ಮಾಡದಿರುವಾಗ ಯಾಕೀ ಮನೋಭಾವ? ಈಗಷ್ಟೇ ಜಗತ್ತಿನ, ಸಕಲ ಜೀವಿಗಳ ಒಳಿತಿಗೆ ಪ್ರಾರ್ಥನೆ ಮಾಡಿದಿರಿ. ಆ ಪ್ರಾರ್ಥನೆಯ ಪ್ರಭಾವ ಕೆಲವೇ ಕ್ಷಣಗಳೂ ಉಳಿಯಲಿಲ್ಲವೇ? ಅದೂ ಕೂಡಾ ಭಗವಂತನಿಂದ ಸೃಷ್ಟಿಸಲ್ಪಟ್ಟದ್ದು; ಅದಕ್ಕೂ ಬದುಕುವ ಹಕ್ಕಿದೆ. ಅದರ ಪಾಡಿಗೆ ಅದು ಬಂದು ಹೋಗುತ್ತದೆ.'

ಒಮ್ಮೆ ಶಿಷ್ಯೆ ಶೋಭನಾಸ್ವಾಮಿ ರುಕ್ಮಿಣಿಗೆ ಕ್ರಿಸ್‌ಮಸ್ ಸಮಯದಲ್ಲಿ ಶುಭಾಷಯ ಕೋರಿದ್ದರಂತೆ. ಎಲ್ಲಾ ಮತ ಧರ್ಮಗಳನ್ನು ಸಮಾನವಾಗಿ ಗೌರವಿಸುತಿದ್ದ ರುಕ್ಮಿಣಿ ಪ್ರತಿಯಾಗಿ ಶುಭಾಷಯ ಕೋರಿ ತಕ್ಷಣವೇ ವಿಷಾದ, ನೋವಿನಿಂದ ನುಡಿದರಂತೆ. 'ಕ್ರಿಸ್ಮಸ್‌ನ್ನು ಆಚರಿಸಲು ಎಷ್ಟು ಬೇಜಾರಾಗುತ್ತಿದೆ ಎಂದರೆ ಇದೇ ದಿನ ರಾತ್ರಿ ವಿದೇಶಗಳಲ್ಲಿ ನೂರಾರು ಜನ ಅವರ ಊಟದ ಟೇಬಲ್ ಮೇಲೆ ಮಾಂಸವನ್ನಿಟ್ಟು ಕ್ರಿಸ್ಮಸ್ ಆಚರಿಸುತ್ತಿರುತ್ತಾರೆ'.

1952ರಲ್ಲಿ ರಾಜ್ಯಸಭಾ ಸದಸ್ಯೆಯಾದಾಗ 1890ರಲ್ಲಿದ್ದ ಪ್ರಾಣಿಹಿಂಸಾ ಪ್ರತಿರೋಧದ ಶಾಸನವನ್ನು ಮರುಜಾರಿ ಮಾಡಬೇಕೆಂದು ಕೋರಿ ಒತ್ತಾಯಿಸಿ ತಾವೇ ಒಂದು ಮಸೂದೆಯನ್ನು ಮಂಡಿಸಿದರು.



ಪಂಡಿತ್ ಜವಾಹರ್‌ಲಾಲ್ ನೆಹರೂ ಅವರ ನೇತೃತ್ವದ ರಾಜ್ಯಸಭೆಯಲ್ಲಿ ಅದು ಪ್ರಸ್ತಾಪ ಆದಾಗ ರುಕ್ಮಿಣಿದೇವಿಯನ್ನು ಶ್ಲಾಘಿಸಿ ಇಂತಹ ಕ್ರಮವನ್ನು ಸರ್ಕಾರ ತರುವುದು ನಿಜಕ್ಕೂ ಸಂತಸದ, ಹೆಮ್ಮೆಯ ವಿಷಯವೆಂದು ನೆಹರೂ ಹೇಳಿದ್ದರಂತೆ. ಅದಕ್ಕೆ ಸ್ಪಂದಿಸಿದ ರುಕ್ಮಿಣೀ ದೇವಿ ಹೀಗೆ ಹೇಳಿದ್ದರಂತೆ; 'ಪ್ರಾಣಿಗಳನ್ನು ಹೀನವಾಗಿ ಕಾಣುವುದು ಮಾನವೀಯತೆಯ ವಿರುದ್ಧ ವರ್ತನೆ. ನಾಗರೀಕತೆಯ ಬೆಳವಣಿಗೆಯ ಪರೀಕ್ಷೆ ಎಂದರೆ ಭಾವನೆಗಳ ಬೆಳವಣಿಗೆ ಮತ್ತು ಪ್ರೇಮಮಯೀ ನಡವಳಿಕೆ.' ಅದಾದ ಕೆಲವು ಸಮಯದ ನಂತರ ಸರ್ಕಾರ ಈ ಕುರಿತಂತೆ ಶಾಸನವನ್ನು ರೂಪಿಸಿತ್ತು.

ಸರ್ಕಸ್‌ಗಳಲ್ಲಿ ಪ್ರಾಣಿಗಳನ್ನು ಮನರಂಜನೆಯ ಉದ್ದೇಶದಿಂದ ಬಳಸುವುದರ ಬಗ್ಗೆ ರುಕ್ಮಿಣೀಗೆ ವಿರೋಧವಿತ್ತು. ಜೊತೆಗೆ ಧರ್ಮದ ಹೆಸರಿನಲ್ಲಿ ಪ್ರಾಣಿಬಲಿಯ ಕುರಿತೂ ಅವರು ಕಿಡಿಕಿಡಿಯಾಗಿದ್ದರು. ಅವರ ಕ್ರಾಂತಿಕಾರಿ ಮುನ್ನಡೆ ಇಂದಿಗೆ ಎಷ್ಟೋ ಪ್ರಾಣಿದಯಾಪರರಿಗೆ ಆದರ್ಶವಾಗಿದೆ. ಅದರಲ್ಲೂ 1960 ಅಕ್ಟೋಬರ್‌ನಲ್ಲಿ ಭಾರತದಲ್ಲಿ ಪ್ರಾಣಿ ಕ್ಷೇಮಾಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದು ; ಪ್ರದರ್ಶನ, ಮನರಂಜನೆ ಮತ್ತು ಸಂಶೋಧನೆಯ ಹೆಸರಿನಲ್ಲಿ ಪ್ರಾಣಿಗಳ ಬಳಕೆಯ ವಿರುದ್ಧ ಶಿಸ್ತನ್ನು ರೂಪಿಸಲಾಯಿತು. ಇಂದಿಗೆ ಭಾರತದಲ್ಲಿ ಮಾತ್ರ ಇಂತಹ ಒಂದು ಪ್ರಾಧಿಕಾರ ಇರುವುದು ಎನ್ನಲು ಹೆಮ್ಮೆಯಾಗುತ್ತದೆ. ಈ ಪ್ರಾಧಿಕಾರವು ಶಿಫಾರಸ್ಸು ಮಾಡುವ ವಿಷಯಗಳ ಔಚಿತ್ಯ ಗಮನಿಸಿ ಸಮಿತಿಯನ್ನು ರಚನೆ ಮಾಡಲಾಗುತ್ತಿತ್ತು. ಶಾಸನಕ್ಕೆ ತಕ್ಕಂತೆ ಪ್ರಾಣಿಗಳನ್ನು ನಡೆಸಿಕೊಳ್ಳಲಾಗುತ್ತಿದೆಯೇ ಇಲ್ಲವೇ ಎಂಬುದು ತಿಳಿಯುವುದು ಇದರ ಕರ್ತವ್ಯ. ಇದರ ಶಿಫಾರಸ್ಸಿನ ಮೇರೆಗೆ ಮೊದಲ ಸಮಿತಿ 1964ರಲ್ಲಿ purpose of control and supervision of experiments on animals ಎಂಬ ಉದ್ದೇಶದಡಿಯಲ್ಲಿ ರೂಪ ತಾಳಿತು. ಅದು ಕೊಟ್ಟ animal experimentation – ವರದಿ ಪ್ರಾಣಿಗಳನ್ನು ಹೇಗೆಲ್ಲಾ ಹಿಂಸಿಸುತ್ತಾರೆ ಎಂಬುದು ಸವಿವರವಾಗಿ ವಿವರಿಸಿತ್ತು.

ಮಾತು ಬಾರದ ಪ್ರಾಣಿಗಳಿಗೆ ರುಕ್ಮಿಣಿ ಮಾತಾಗಿದ್ದರು. 'ಜನರಿಗೆ ಔಷಧಾಲಯಗಳಲ್ಲಿ ಆಗುವ ಪ್ರಾಣಿಹಿಂಸೆ ಮತ್ತು ಔಷಧಗಳಲ್ಲಿ ಪ್ರಾಣಿಗಳ ಬಳಕೆ ಬಗ್ಗೆ ತಿಳಿದರೆ ಖಂಡಿತಾ ಅಂತಹ ಔಷಧಗಳನ್ನು ತೆಗೆದುಕೊಳ್ಳಲು ಮನಸ್ಸು ಬರಲಿಕ್ಕಿಲ್ಲ. ಈ ಕ್ರೂರತೆ ಸರಿಯಾಗಿ ಜನರಿಗೆ ಗೊತ್ತಾಗಬೇಕು. ಜೀವಂತವಾಗಿದ್ದಾಗಲೇ ಪ್ರಾಣಿಗಳನ್ನು ನಾನಾ ಬಗೆಯಾಗಿ ವಿಧವಿಧವಾಗಿ ಕತ್ತರಿಸಿ ಹಿಂಸೆ ಮಾಡುವುದು ಹಲವು ಕಡೆ ನಡೆಯುತ್ತಿದೆ. ಇದಕ್ಕೆಂದೇ ಭಾರತದಿಂದ ಪ್ರಾಣಿಗಳ ರಫ್ತು ಕೂಡಾ ಅಗುತ್ತಿದೆ. ಇವೆಲ್ಲವನ್ನೂ ಭಾರತ ಸರ್ಕಾರ ಸಂಪೂರ್ಣವಾಗಿ ನಿಷೇಧಿಸಬೇಕು' ಎಂದಿದ್ದರು ರುಕ್ಮಿಣಿ.

1964ರಲ್ಲಿ ಬ್ಲೂಕ್ರಾಸ್ ಇಂಡಿಯಾವು ಬೀದಿನಾಯಿಗಳ ಸಂಖ್ಯೆ ಕಡಿಮೆ ಮಾಡುವ ದೃಷ್ಟಿಯಿಂದ ನಾಯಿ ಗಳನ್ನು ಹಿಡಿದು ಕೊಲ್ಲಲು ಹೊರಟಾಗ ; ಕೊಲ್ಲುವುದಕ್ಕಿಂತಲೂ ಅವುಗಳನ್ನು ಬಂಧಿಸಿ ಚುಚ್ಚುಮದ್ದು ನೀಡಿ ಬಿಡುವುದೇ ಒಳ್ಳೆಯದು ಎಂದು ಹೋರಾಟಕ್ಕಿಳಿದು ಸಹಕಾರ ಕೊಟ್ಟವರು ರುಕ್ಮಿಣಿ ಒಬ್ಬರೇ ! ಈ ಕುರಿತಂತೆ ಮುಂಬೈ ಮುನಿಸಿಪಲ್ ಕಾರ್ಪೋರೇಷನ್‌ಗೆ ತಾಕೀತು ಕೂಡಾ ಮಾಡಿದ್ದರು. ಆದರೆ ಇದನ್ನು ಕಾರ್ಪೋರೇಷನ್ ಪರಿಗಣಿಸಲಿಲ್ಲ. ಸುಮಾರು 25 ವರ್ಷಗಳ ನಂತರ ವಿಶ್ವ ಆರೋಗ್ಯ ಸಂಸ್ಥೆಯು ಬೀದಿನಾಯಿಗಳ ಸಂಖ್ಯೆಗೆ ಕಡಿವಾಣ ಹಾಕುವ ದೃಷ್ಟಿಯಿಂದ ಜನನನಿಯಂತ್ರಣ ಮತ್ತು ರೋಗನಿಯಂತ್ರಣಕ್ಕೆ ಚುಚ್ಚುಮದ್ದು ಹಾಕುವ ನಿಯಮಾವಳಿ ಸಿದ್ಧಪಡಿಸಿತು. ರುಕ್ಮಿಣೀ ಅವರ ದೂರದರ್ಶಿತ್ವಕ್ಕೆ ಇದು ಉತ್ತಮ ಉದಾಹರಣೆ.

ಮತ್ತೊಮ್ಮೆ 1956ರಲ್ಲೂ ಮರು ನಾಮಕರಣಗೊಂಡರು. ಅವರ ಪ್ರಕಾರ ಉಪನಿಷತ್ತು ಹೇಳುವಂತೆ ತ್ಯಾಗದಿಂದಷ್ಟೇ ವ್ಯಕ್ತಿ ಅಮರನಾಗುತ್ತಾನೆ. ಹಣ, ಅಧಿಕಾರದಿಂದಲ್ಲ. ಅಂಥವರನ್ನು ದೇಶದ ಅತ್ಯುನ್ನತ ಹುದ್ದೆ– ರಾಷ್ಟ್ರಪತಿ ಹುದ್ದೆ ಹುಡುಕಿಕೊಂಡು ಬಂದಿತ್ತು! ಸಾಮಾನ್ಯರಾಗಿದ್ದರೆ ಯಾರು ತಾನೇ ತಿರಸ್ಕರಿಸಿಯಾರು? ಆದರೆ ರುಕ್ಮಿಣಿ ಮನಸ್ಸು ಮಾಡಿರಲಿಲ್ಲ!! (ಸಶೇಷ..)

## ಚಂದಾ ವಿವರ

ನೂಪುರ ಭ್ರಮರಿ ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯಾದರೂ ಖರ್ಚು-ವೆಚ್ಚಗಳನ್ನು ಸರಿದೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಪ್ರಾರಂಭಿಕ ವರ್ಷಗಳಿಂದಲೂ ಚಂದಾ ವಿವರ ಕಡ್ಡಾಯವಾಗಿರಲಿಲ್ಲ; ಫಲವಾಗಿ ಎಷ್ಟೋ ಬಾರಿ ಸಂಚಿಕೆಗಳನ್ನು ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಪತ್ರಿಕೆಗೆ ಅದರದ್ದೇ ಆದ ಜವಾಬ್ದಾರಿ, ಸಮಸ್ಯೆಗಳಿರುವ ಕಾರಣ ಉಚಿತವಾಗಿ ಕಳಿಸಿಕೊಡುವುದು ಅಥವಾ ಗೌರವಪ್ರತಿ ನೀಡುವುದು ಎಲ್ಲಾ ಸಂದರ್ಭದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕೆಳಕಂಡ ಚಂದಾವಿವರಗಳನ್ನು ಲಕ್ಷಿಸಿ 'ಸಂಪಾದಕರು, ನೂಪುರ ಭ್ರಮರಿ' ಹೆಸರಿಗೆ ಡಿ.ಡಿ/ಮನಿಯಾರ್ಡರ್‌ನಲ್ಲಿ ಮೊತ್ತವನ್ನು ಕಳಿಸಬೇಕೆಂದು ಕೋರುತ್ತೇವೆ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್ ಕಮಿಷನ್ ಮೊತ್ತ 40/-ರೂ ಹೆಚ್ಚಿಗೆ ಸೇರಿಸಿ ಕಳಿಸಬೇಕೆಂದು ಮನವಿ. ಪತ್ರಿಕೆ, ಪ್ರತಿಷ್ಠಾನಕ್ಕೆ ಬೇರಾವುದೇ ಆದಾಯಮೂಲಗಳಿಲ್ಲದಿರುವುದರಿಂದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಉದಾರ ದೇಣಿಗೆಗಳನ್ನು ನೀಡಲು ಆಸಕ್ತಿಯಿರುವವರನ್ನೂ ಆದರಪೂರ್ವಕವಾಗಿ ಸ್ವಾಗತಿಸುತ್ತೇವೆ..

ನೂಪುರ ಭ್ರಮರಿಯ ಹಿಂದಿನ ಸಂಚಿಕೆಗಳಲ್ಲಿ ಕೆಲವೇ ಕೆಲವು ಲಭ್ಯವಿವೆ. ಆಸಕ್ತರು ಲಭ್ಯತೆಯನ್ನನುಸರಿಸಿ ಖರೀದಿಸಿ ಪ್ರಯೋಜನ ಪಡೆದುಕೊಳ್ಳಬಹುದು. ಹಿಂದಿನ ಸಂಚಿಕೆಗಳ ಬಿಡಿಪ್ರತಿ ಬೆಲೆ- 20ರೂ. ; ವಿಶೇಷ ಸಂಚಿಕೆ -30ರೂ. ಆಜೀವ ಸದಸ್ಯರಾದಲ್ಲಿ ಅಥವಾ ಮುದ್ರಣ ನಿಧಿಗೆ ಸಹಕರಿಸಿದವರಿಗೆ ಸದಸ್ಯತ್ವದ ದಿನಾಂಕದಿಂದ ಮೊದಲ್ಗೊಂಡು ಆಜೀವ ಪರ್ಯಂತ ಪತ್ರಿಕೆಯನ್ನು ಕಳಿಸಿಕೊಡಲಾಗುವುದು. ಆಜೀವ ಸದಸ್ಯರು/ಮಹಾಪೋಷಕರು ಪತ್ರಿಕೆಯ ಒಟ್ಟಾರೆ ಬೆಳವಣಿಗೆಯ ಹಿನ್ನೆಲೆಯಲ್ಲಿಯೂ ಕೈಜೋಡಿಸಬಹುದಾಗಿದ್ದು; ಪತ್ರಿಕೆಗೆ ಸಂಬಂಧಿಸಿದ ಕಾರ್ಯಕ್ರಮ, ನೀತಿ-ನಿಯಮ ಇತ್ಯಾದಿ ರೂಪುರೇಷೆಗೂ ಜವಾಬ್ದಾರಿಯಾಗಿರುತ್ತಾರೆ. ಅಂತೆಯೇ ಆಸಕ್ತ ಸದಸ್ಯರು ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆ ಮತ್ತು ಅದರ ಸಂಬಂಧಿತ ಅಂಗಸಂಸ್ಥೆಗಳ ಕಾರ್ಯಕ್ರಮದ ಮೇಲ್ವಿಚಾರಕರಾಗಬಹುದು.

**ವಾರ್ಷಿಕ ಚಂದಾ : 130 ರೂ.**
**ಆಜೀವ ಸದಸ್ಯತ್ವ : 1000 ರೂ**
**ಮುದ್ರಣ ನಿಧಿ ಸಹಾಯ ಧನ : 3,500 (ಪೋಷಕ)**

ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ;
ಪತ್ರಿಕೆ ಮತ್ತು ಸಂಶೋಧನಾ ಅಸೋಸಿಯೇಷನ್‌ನ ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ (ಮೊಬೈಲ್ : 94817 65544)
**ಎನ್. ರಾಮಭಟ್,** ಉಡುಪಿ (ಮೊಬೈಲ್ : 94499 37170)
**ದೀಪಕ್ ಕುಮಾರ್,** ಪುತ್ತೂರು, ದಕ್ಷಿಣ ಕನ್ನಡ (ಮೊಬೈಲ್ : 99640 23548)
**ಬಿ.ಜಿ. ನಾರಾಯಣ ಭಟ್,** ಮಡಿಕೇರಿ (ಫೋನ್ : 08272-222709)

---

**ನೃತ್ಯ ಸಂಶೋಧಕರ ಒಕ್ಕೂಟಕ್ಕೆ ಸದಸ್ಯರಾಗಲು ಇಚ್ಛಿಸುವವರು**
**ದೂರವಾಣಿ ಸಂಖ್ಯೆ : 99641 40927 ಸಂಪರ್ಕಿಸಿ.**
**ವೆಬ್‌ಸೈಟ್ : www.noopurabhramari.com**
**ಸದಸ್ಯ ಧನ (ಮೂರು ವರ್ಷಕ್ಕೆ) 1,500-00**
**ಆಜೀವ 5,000-00**
**ದಾನಿಗಳಿಂದ ದೇಣಿಗೆಗಳನ್ನು ಸ್ವೀಕರಿಸಲಾಗುವುದು.**
**ನೃತ್ಯ ಸಂಶೋಧನಾ ಸಮ್ಮೇಳನಕ್ಕೆ ದೇಣಿಗೆಗಳನ್ನಿತ್ತು ಪ್ರೋತ್ಸಾಹಿಸಿ.**

ಸಂಚಿಕೆಗಳಿಗೆ ಅನುದಾನವಿತ್ತವರು

# ಭಾರತೀಯ ಭಾಷಾ ಸಂಸ್ಥಾನ

## ಮಾನಸ ಗಂಗೋತ್ರಿ,

## ಮೈಸೂರು

Published with Financial Assistance from
the Central Institute of Indian Languages

(Ministry of Human Resource Development,
Department of Higher Education, Govt of India)

**Manasagangothri, Mysore-570006**

**Vide Sanction letter 53-4(1)/2011-12/Kan/LM/GRNT dated Jan. 20, 2012 under the scheme of Grant-in-Aid**